
ಕೊರವಂಜಿ



ಆಗಸ್ಟ್ ೧೯೪೨

★

ಸಂಪಾದಕರು:
ಶ್ರೀ. ರಾ. ಶಿ.

ಸಲಹೆಗಾರರು:
ಶ್ರೀ. ನಾ. ಕಸ್ತೂರಿ

ಚಿತ್ರಕಾರರು:
ಶ್ರೀ. ಆರ್. ಕೆ ಲಕ್ಷ್ಮಣ್

★

ಬಿಡಿಪತ್ರಿಕೆ
ಎರಡಾಣೆ.

ನಗೆಯ ಮಾಸ ಪತ್ರಿಕೆ

ಕೊರವಂಜಿ

ಕೊರವಂಜಿಯು ಪ್ರತಿ ತಿಂಗಳ ಪಾಡ್ಯವೂ ಹೊರಬೀಳುವುದು.

ತಿಳಿ ಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನು ದ್ವೇಷಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.


ಸಂಪಾದಕೀಯ ಪತ್ರ ವ್ಯವಹಾರಗಳನ್ನು ಸಂಪಾದಕರು. ನಂ. ೧, ವೆಂಕಟರಂಗೈಯ್ಯಂಗಾರ್ ರಸ್ತೆ, ಮಲ್ಲೇಶ್ವರ, ಬೆಂಗಳೂರಿನಲ್ಲಿ ನಡೆಸಬೇಕು.

ವ್ಯವಸ್ಥಾಪಕರಲ್ಲಿ ಮಿಕ್ಕ ವಿಷಯಗಳನ್ನು ಪ್ರಸ್ತಾಪಿಸಬೇಕು.

ವ್ಯವಸ್ಥಾಪಕರು,
೨೮-ಎ, ಲಾಲ್‌ಬಾಗ್ ರೋಡ್, ಬೆಂಗಳೂರು ಸಿಟಿ

ವಾರ್ಷಿಕ ಚಂದಾ ರೂ. 2-0-0 **ಬಿಡಿ ಪ್ರತಿ 0-2-0**

ವಿಷಯಾನುಕ್ರಮಣಿಕೆ



ಸಂಪುಟ ೧] ಕೊರವಂಜಿ, ಆಗಸ್ಟ್, ೧೯೪೨ [ಸಂಚಿಕೆ ೫

ಕುಹ ಕಿಡಿಗಳು

ಜಪಾನೀಯರಿಗೆ ಹಾರ್ಮೋನಿಯಂ ಕಂಡರೆ ಬಹಳ ಪ್ರೇಮವಂತೆ.

—ಈಗ ತಿಳಿಯಿತು ಅವರ ದೌರ್ಜನ್ಯದ ಕಾರಣ.

* * *

ಹಿಟ್ಲರು ಫಿನ್‌ಲೆಂಡಿಗೆ ಮ್ಯಾನರ್‌ಹೈಂರ ಹುಟ್ಟಿದ ಹಬ್ಬದ ಸಲುವಾಗಿ ಹೋಗಿದ್ದರಂತೆ.

—'ಕಾರ್ಯವಾಸಿ ಕತ್ತೆ ಕಾಲು ಕಟ್ಟು'

* * *

ಬೆಂಗಳೂರಿನಲ್ಲಿ ಹದಿನೈದು ದಿನಕ್ಕೊಮ್ಮೆ ನೀರು ನಿಲ್ಲಿಸಬೇಕೆಂದಿರುವರಂತೆ.

—ಕವಾಡಿಗರು ತಮ್ಮ ವ್ಯಾಪಾರಕ್ಕೇ ಕಷ್ಟವೆಂದು ವಿರೋಧಿಸುತ್ತಿದ್ದಾರೆಂದು ಕೇಳುತ್ತೇವೆ.

* * *

ಪ್ರಸಿದ್ಧ ಸೇನಾನಾಯಕನೊಬ್ಬನು ಮರಣ ಹೊಂದಿದಾಗ, ಚರಮ ಭಾಷಣಕಾರರಲ್ಲೊಬ್ಬರು ಹೇಳಿದರಂತೆ.

—'ದಿವಂಗತ ಸೇನಾನಾಯಕನು ಬಹಳ ಹೆಂಗರುಳಿನವನು. ಆತನಿಗೆ ಶತ್ರುಗಳೇ ಇದ್ದಿಲ್ಲ' ಎಂದು.

ರಾಜಾಜಿಯವರು ಇನ್ನು ಮುಂದೆ ಮಸೀದಿಗಳಲ್ಲೇ ಭಾಷಣ ಮಾಡುತ್ತಾರೆಂಬ ಸುದ್ದಿಯು ಶುದ್ಧ ಸುಳ್ಳೆಂದು ಖಚಿತವಾಗಿ ತಿಳಿಯಬಂದಿದೆ.

* * *

ಶಾಂತಾ ಆಪ್ಟೆಯು ಗಾಡಿಯ ಕೆಳಗೆ ಸಿಕ್ಕಿ ಅಪಘಾತಕ್ಕೀಡಾದಳಂತೆ.

— ಗಾಡಿಯನ್ನು ಬಹಿರಂಗ ಹರಾಜು ಹಾಕಿದರೆಂದೂ, ಕೋಟ್ಯಾಧೀಶ್ವರ ಯುವಕನೋರ್ವನು, ಒಂದು ಲಕ್ಷ ರೂಪಾಯಿಗೆ ಆ ಗಾಡಿಯನ್ನು ಕೊಂಡುಕೊಂಡನೆಂಬುದೂ ಶುದ್ಧ ಸುಳ್ಳು.

* * *

ಸಾಯಂಕಾಲ ಗಾಳಿ ಸಂಚಾರಕ್ಕೆಂದು ತಂದೆ ಎಳೆಯ ಮಗು ಹೋಗುತ್ತಿದ್ದಾಗ ತಂದೆಯು ತನ್ನ ಬರೀ ಕಾಲನ್ನು ಚಾಪೆ ಮುಳ್ಳಿನ ಮೇಲಿಟ್ಟು ತಕ್ಷಣ ಕುಣಿವ ಹೆಜ್ಜೆ ಹಾಕಲಾರಂಭಿಸಿದನಂತೆ.

—ಎಳೆಯ ಮಗನು 'ಏನಪ್ಪಾ, ಕ್ರೂಷನ್ ತಾತನಂತೆ ನಡೆಯುತ್ತಿದ್ದೀ' ಎಂದು ಮೂದಲಿಸಿದನಂತೆ.

* * *

ದ್ರಾವಿಡಾಸ್ಥಾನದಲ್ಲಿ ಊರುಗಳಾಚೆ, ಹೊಲಗೇರಿಗಳಿದ್ದಲ್ಲಿ, ಬ್ರಾಹ್ಮಣಗೇರಿಯನ್ನು ಏರ್ಪಡಿಸಬೇಕೆಂಬ ಯೋಜನೆ ಉಂಟಂತೆ.

* * *

ಸಮ್ಮೂರಿನ ಪತ್ರಿಕೆಯೊಂದರಲ್ಲಿ ಈ ಸುದ್ದಿಗಳು ಪ್ರಕಟವಾಗಿವೆ.

"ಪ್ರಜಾಪ್ರತಿನಿಧಿಸಭೆಯು ಬೆಂಗಳೂರಿನಲ್ಲಿ ಸೇರುವುದು."

"ಮನಿಲಾ ವಿನೋದಾವಳಿಯೂ ಬೆಂಗಳೂರಿನಲ್ಲಿ ಪ್ರಾರಂಭಿಸುವುದು."

—ಹೀಗೆ ಎರಡೆರಡು ತಮಾಷೆಸ್ಥಾನಗಳು ಒಟ್ಟಿಗೇ ಸೇರುವುದಕ್ಕಿಂತ ಒಂದಾಗುತ್ತಲೂ ಒಂದು ಬಂದರೆ ಚೆನ್ನಲ್ಲವೇ?

* * *

ರೈಲ್ವೆ ಮಾರ್ಗವನ್ನು ಸೈನಿಕರ ಆಡಳಿತಕ್ಕೆ ಬಿಟ್ಟುಕೊಡಬೇಕೆಂದು ಗೊತ್ತಾಗಿರುವುದಂತೆ.

—ಇರಬೇಕು! ನಾವು ಮೊನ್ನೆ ನೋಡಿದ ರೈಲು ಹಿಂದುಹಿಂದಕ್ಕೇ ವೇಗವಾಗಿ ಓಡುತ್ತಿತ್ತು.

* * *

ಹೈಡ್ರಿಕ್ ಅವರು ಅಕಾಲ ಮರಣಕ್ಕೆ ತುತ್ತಾದರಂತೆ. ನರಕದಲ್ಲಿ ಆತನು ಏನಾದರೂ ಗಲಭೆ ಮಾಡಿದರೆ ಅಲ್ಲಿ ಕೂಡ ಅವನನ್ನು ನಿರ್ಮೂಲ ಮಾಡಲೋಸುಗ ಇನ್ನೂರು ಮಂದಿ ಜೆಕ್ಕರನ್ನೂ ಅವನ ಕೂಡ ಪರಲೋಕಕ್ಕೆ ಕಳುಹಿಸಿರುವರಂತೆ.

ಹುರಿಗಾಳು

ಎಂ. ಜಿ.ಎಸ್. ಟೂರ್ನಮೆಂಟುಗಳಿಗೆ ಮೊದಲು ಒಂದು ಟೀಮಿನ ಕ್ಯಾಪ್ಟನ್‌ರವರು ಬಂದು ಸಂಬಂಧಪಟ್ಟ ಉಪಾಧ್ಯಾಯರ ಹತ್ತಿರ ನಿಂತು, "ಸಾರ್! ನನ್ನ ಟೀಮಿಂದ ಇಬ್ಬರನ್ನು ತೆಗೆದ ಹೊರತು ನಮ್ಮ ಕಾಲೇಜಿಗೆ ಮಾನ ಬರುವುದಿಲ್ಲ'' ಅಂತ ಅಂದಾಗ, ಅವರು, ನಿಧಾನವಾಗಿ, ಅರೆಗಣ್ಣು ಮುಚ್ಚಿಕೊಂಡು, ''ನೀನು ಹೇಳುವುದು ನಿಜ! ನನಗೂ ಹಾಗೆಯೇ ಅನ್ನಿಸಿತು. ಇನ್ನೊಬ್ಬರು ಯಾರೂ ಅಂತ ಹೇಳಿ ಬಿಡು, ಈಗಲೇ" ಅಂತ-ಅನ್ನಬಹುದೆ?

○ ○

ಮೇಜಿನ ಕೆಳಗೆ ಬಿದ್ದಿದ್ದ ಬೀಡೀ ಚೂರನ್ನ ತೋರಿಸುತ್ತಾ ಮ್ಯಾನೇಜರ್ ಸಾಹೇಬರು ಬೋರನನ್ನು ಸಂಬೋಧಿಸಿ, ''ನಿನ್ನದೇನೋ?" ಅಂದರೆ, ಅವನು ಅಲ್ಲೇ ನಿಂತುಕೊಂಡು, "ತಮ್ಮ ದೃಷ್ಟಿ ಅದರ ಮೇಲೆ ಮೊದಲು ಬಿತ್ತು. ಆದ್ದರಿಂದ ಅದು ತಮಗೆ ಸೇರಬೇಕಾದದ್ದು" ಅಂತ-ಅನ್ನಬಹುದೆ?

○ ○

"ಲೋ! ನಿನ್ನ ತಂದೆಯನ್ನ ಜೇನು ಅಟ್ಟಿಸಿಕೊಂಡು ಬರುತ್ತಾ ಇದೆ, ಪಾಪ! ಓಡೋಡಿ ಬರುತ್ತಾ ಇದಾರೆ" ಅಂತ ಯಾರೋ ಬಂದ್ರು ಹೇಳಿದರೆ ಮಗನಾದವನು, "ತಡಿ! ಕ್ಯಾಮೆರಾ ತರುತ್ತೇನೆ" ಅಂತ ಅನ್ನಬಹುದೆ?

○ ○

''ನಾನು ಮನೆಗೊಂದು ಹೊಸ ನಾಯಿ ತಂದಿದೇನೆ"

"ಯಾರಾದರೂ ಬಂದರೆ ಕಚ್ಚುತ್ತೇನೋ"

"ಇಲ್ಲ, ಇಲ್ಲ! ಕಳ್ಳರು ಗಿಳ್ಳರು ಬಂದರೆ, ನಾವು ಹೋಗಿ ಅದನ್ನ ಎಬ್ಬಿಸುತ್ತೇವೆ. ಆಗ, ಬೊಗಳುತ್ತೆ, ಅಷ್ಟೆ''



''ಏನಯ್ಯಾ. ನನ್ನನ್ನ ಹೋಟಲಿಗೆ ಕರೆದುಕೊಂಡು ಬಂದು ನೀನು ಪೇಪರೋದುತ್ತಾ ಕೂತುಬಿಟ್ಟೆ?"

"ಮಾಣಿ! ಅವರಿಗೂ ಒಂದು ಪೇಪರು ಕೊಡು! ಓದಿಕೊಳ್ಳಲಿ, ಪಾಪ''

ಡ್ರೈವರನ್ನು ಒಳಗೆ ಕೂರಿಸಿ ಸಾಹೇಬರೇ ಕಾರನ್ನು ನಡೆಸುತ್ತಾ ಹೋಗುತ್ತಾ ಇದ್ದದ್ದನ್ನ ಕಂಡ ದಾರಿಹೋಕರಿಬ್ಬರ ಸಂಭಾಷಣೆಯನ್ನು ಕೊಂಚ ಲಾಲಿಸಿ!

ಒಬ್ಬ: "ಪಾಪ ! ದೊಡ್ಡಮನುಷ್ಯ. ತಾನೇ ಗಾಡಿ ಬಿಟ್ಟುಕೊಂಡು ಹೋಗುತ್ತಿದಾನೆ''

ಮತ್ತೊಬ್ಬ: "ಏಕೆ? ಒಳಗೆ ಒಬ್ಬ ಕುಳಿತಿದಾನಲ್ಲಾ?"

ಒಬ್ಬ: ''ಅವನಿಗೆ ಕಳೆದ ತಿಂಗಳ ಸಂಬಳ ಇನ್ನೂ ಕೊಟ್ಟಿಲ್ಲ ಅಂತ ಕಾಣುತ್ತದೆ."

ಂ ಂ

ಆಕೆ ತವರುಮನೆಗೆ ಕಳುಹಿಸಿದ ಪತ್ರದಲ್ಲಿ ''ಅಮ್ಮಾ! ನಾನು ನಿನ್ನೆ ಅಡಿಗೆ ಮಾಡಿದೆ....ಈ ಬೆಳಗ್ಗೆ ಅಡಿಗೆಯವರನ್ನು ಅವರೇ ನಿಯಮಿಸಿದರು"ಎಂದು ಬರೆದಿದೆ.

ಹೆಂ: "ಕಾಫಿ ಕುಡಿಯಬೇಡಿ, ಅಂದ್ರೆ! ಅದರಲ್ಲಿ ವಿಷ ಇದೆಯಂತೆ. ಮನುಷ್ಯನ ಪ್ರಾಣಾನ ,ನಿಧಾನವಾಗಿ ತೆಗೆದುಬಿಡುತ್ತದಂತೆ"

ಗಂ: "ನನಗೇನು ಅಷ್ಟು ಆತುರವಿಲ್ಲ; ನಿಧಾನವಾಗಿಯೇ ತೆಗಿಯಲಿ"

ಂ ಂ

ಜವಾನ: 'ಸಾಹೇಬರು ಮನೆಯಲ್ಲಿಲ್ಲ! ಯಾರಾದರೂ ಬಂದರೆ ಬಿಲ್ಲು ಇಸುಕೊಂಡು ಮೇಜು ಮೇಲೆ ಇಟ್ಟಿರು, ಅಂತ ಹೇಳಿದಾರೆ....''

ಬಂದವರು: ಬಿಲ್ಲೂ ಇಲ್ಲ, ಗಿಲ್ಲೂ ಇಲ್ಲ! ಸುಮ್ಮನೆ ಅವರನ್ನು ಕಂಡು ಕೊಂಚ....

ಜವಾನ: ಹಾಗಾದರೆ ಈ ಬಂಗಲಿಯಲ್ಲ, ಸ್ವಾಮಿ! ಬೇರೆ ಯಾವುದೋ ಇರಬೇಕು ನೀವು ಹೋಗಬೇಕಾದ್ದು....

ಜರ್ಮನನಿಗೆ ಬುದ್ಧಿಯನು ನೂರ್ಕಾಲ ಹೇಳಿದರೆ
ಫೋರ್ಕಲ್ಲ, ಮೇಲೆ ಬಾಂಬುಗರೆದರಾಕಲ್ಲು
ಕರುಗಿ ಮರುಗಲಹುದೇ ಸಮರಜ್ಞ !

* *

ಧೈರ್ಯ ಎನ್ನದಿನಬೇಡ ಶೌರ್ಯ ಎನ್ನದಿನಬೇಡ
ಧಾಡು ಹಿಂತಿರುಗಿ ನಡೆವಾಗ ಸೈನಿಕನೇ ನೀನೊಡಿ
ಬಂದೊಡೇ ಒಳಿತು ಸಮರಜ್ಞ !

* *

ಕೋವಿ ಮದ್ದಿದ್ದವನ ಮೊಗವು ಮುದ್ದು ಬರುವಂತಿಕ್ಕು
ಅದಿಲ್ಲದವನ ಮೊಗವು ಹಾಳೂರ
ಹದ್ದಿನಂತಿಕ್ಕು ಸಮರಜ್ಞ !

ಕಲ್ಯಾಣಿಯ ತಂದೆ

ಕಲ್ಯಾಣಿ, ರಂಗಣ್ಣನವರ ಮಗಳು. ರಂಗಣ್ಣನವರು ಡಿಸ್ಟ್ರಿಕ್ಟ್ ಕೋರ್ಟು ಅಡ್ವೋಕೇಟರು. ನೋಡುವುದಕ್ಕೆ ಸ್ವಲ್ಪ ಹಾಗೆ ಹಾಗೆಯೇ! ಅಳಿಯನ ಶಿಕಾರಿ ಪ್ರಮೇಯದಲ್ಲಿ ಮೊದಲು ಅವರು ನಮ್ಮ ಮನೆಗೆ ಬಂದಾಗ ನನಗೆ ಅವರ ಮುಖಾವಲೋಕನದಿಂದ ತೀರ ಅಸಂತೃಪ್ತಿ ಉಂಟಾಯಿತು. ಅಷ್ಟೇ ಅಲ್ಲ, ಅವರನ್ನು ನೋಡಿದಾಗಲೆಲ್ಲ, ಭಗವಂತ ಹೀಗೂ ತಿದ್ದಬಹುದೇ ಒಬ್ಬರ ಮುಸುಡಿಯನ್ನ, ಎಂಬ ಕನಿಕರವೂ ಮೂಡುತ್ತಿತ್ತು. ಆದರೂ ನನ್ನ ತಾಯಿ ತಂದೆಯರು "ಹೋಗೋ! ನೀನು ಮದುವೆಯಾಗುವುದು ಅವರನ್ನಲ್ಲ, ಅವರ ಮಗಳನ್ನ, ತಿಳಿಯಿತೇ, ಮಂಕು! ಅವರ ಮಗಳು, ಅವರ ಹಾಗಲ್ಲ. ಗಂಧದ ಗೊಂಬೆ. ಬೆಣ್ಣೆಯಲ್ಲಿ ಕಡೆದ ಹಾಗಿದಾಳೆ"ಎಂದರು.

ರಂಗಣ್ಣನವರು ಹಳೇಕಾಲದ ಲಾಯರು. ಅವರು ಪ್ರಾಕ್ಟಿಸ್ ಮಾಡಲು ಪ್ರಯತ್ನಿಸಿದಾಗ ಬೆಂಗಳೂರಿಗೂ ಕೂಡ ಇನ್ನೂ ಬೈತಲೆ, ಬೈಸಿಕಲ್ಲು, ಬ್ಲೇಜರು ಬ್ಲೇಡು, ಬಂದಿರಲಿಲ್ಲ. ಆಗಿನ್ನೂ ಅಟಾಟೋಪ, ಆರ್ಭಟ ಕಡಿಮೆ. ಹೊಲ ಗದ್ದೆ ಮನೆ ಮಠ ಪಾತ್ರೆ ಪಣಿಯಾರಗಳ ಮೇಲೆ ಆಗ ಜನರಿಗೆ ಮಮತೆ ಹೆಚ್ಚು; ಅವುಗಳಿಂದಲೇ ಆಗ ಒಬ್ಬರಿಗೆ ಇನ್ನೊಬ್ಬರಿಗಿಂತ ಮುಂಚೆ ತಾಂಬೂಲ ಕೊಡುತ್ತಿದ್ದದ್ದು. ತಲೆ ತಿರುಗಿಸುವ ಕುರ್ಚಿಗಳಾಗಲಿ ಭರಾಟೆಯಿಂದ ಸಾಗಿಸುವ ಕಾರಾಗಲಿ ಇನ್ನೂ ತಲೆಎತ್ತಿರಲಿಲ್ಲ. ಜನ ಜೀವನ ಪ್ರಶಾಂತವಾಗಿತ್ತು;ಯಾವ ಕಾಲದಲ್ಲಿ ಏನು ಮಾಡಬೇಕೆಂದು ಜನರಿಗೆ ನಿಖರವಾಗಿ ತಿಳಿದಿತ್ತು. ಮಾಮೂಲನ್ನು ಮೀರಿದರೆ ಮಾನಹೋಗಿ ಮೂಲೆಯಲ್ಲಿ ಕೂಡುವ ಕಾಲ, ಅದು. ಗೌರವಸ್ಥರೆಲ್ಲರೂ ಬಾಗಿಲು ಹಾಕಿಕೊಂಡು ಪಿಸುಮಾತಾಡುತ್ತಾ ಈರುಳ್ಳಿ ಹುಳಿಯನ್ನು ಬಡಿಸಿಕೊಳ್ಳುತ್ತಿದ್ದ ಗುಪ್ತಯುಗ, ಅದು. ಮಕ್ಕಳಿಗೆ ಅಂತ ನೆಪತೆಗೆದಲ್ಲದೆ ಮಾನಸ್ಥ ಮಹಿಳೆಯರು ಆಗ ಹೋಟಲುಗಳಿಂದ ಇಡ್ಲಿ ತರಿಸುವಹಾಗಿರಲಿಲ್ಲ. ಪಕ್ಕದ ಮನೆ ಪಾತಮ್ಮನವರಿಗೆ ವಿಷಯ ತಿಳಿದರೆ, ಮಾಲುಸಹಿತ ಪತ್ತೆಯಾದ ಪೋಲೀಸಿನವರಂತೆ ಪರದಾಡುವರು, ಜನ! ಆಗ.

ರಂಗಣ್ಣನವರು ತೀರ ಹಳಬರು. ಅವರ ಆಫೀಸ್‌ರೂಂನ Old Curiosity Shop ಅಂತ ನನ್ನ ಸ್ನೇಹಿತರನೇಕರು ಹೇಳಿದ್ದಾರೆ. ಗೋಡೆಮೇಲೆ ಸಾಲಾಗಿ ಧೂಳು ತುಂಬಿ ಹುಳ ತಿಂದ ಸೊಟ್ಟ ಸೊಟ್ಟಗಿನ ಚಿತ್ರಗಳು, ಹರಿದು ಹೋದ ಕ್ಯಾಲಂಡರುಗಳು, ನೇತಾಡುತ್ತಿರುವ

ಕಾಗದದ ಹಾರಗಳು, ಏಲಕ್ಕಿ ಸರಗಳು, ಮುರುಕಲು ಬೀಸಣಿಗೆಗಳು, ಮಸಿ ತುಂಬಿದ ಮಕ್ಕಳ ಫೋಟೋಗಳು, ಮುತ್ತುಗದೆಲೆ ರಾಸಿಯಂತೆ ತಂತಿಯಲ್ಲಿ ತುರುಕಿ ತೂಗಿದ ಕಾಗದದ ಕಟ್ಟುಗಳು; ನೆಲದ ಮೇಲೆ ಹರಕಲು ಜಮಖಾನೆ, ಸೋಟು ಬೆಂಚುಗಳು; ಮೂಲೆಯಲ್ಲಿ ವಿಧವಿಧವಾದ ಪಾದರಕ್ಷೆಗಳ ಅವಶೇಷಗಳು. ಅದರೊಳಕ್ಕೆ ಒಂದು ಪೊರಕೆ ಪ್ರವೇಶಿಸಿ ಹದಿನೈದು ವರ್ಷವಾಗಿರಬಹುದು. ಅನೂಚಾನ ಸಂಸ್ಕೃತಿ; ಹಿರಿಯರ ಪಾದಧೂಳಿ. ಮನುಮಹರಾಯ ಹಾಕಿಕೊಟ್ಟ ಗೆರೆಯನ್ನು ರಂಗಣ್ಣನವರು ಮನಃಪೂರ್ವಕವಾಗಿ ದಾಟುತ್ತಲೇ ಇರಲಿಲ್ಲ. ಅದಕ್ಕೆ ಅವರಿಗೆ ಧೈರ್ಯಸಾಲದು. ಪಂಚಾಂಗ ಒಪ್ಪಿದರೆ, ಆಯುಷ್ಕರ್ಮ; ಪುರೋಹಿತರೊಪ್ಪಿದರೆ ಪ್ರಯಾಣ, ಸಕ್ಕರೆಕುಂಬಳದ ತೊಟ್ಟಿನಹಾಗೆ ಶಿರಸ್ಸಿನ ನಟ್ಟ ನಡುವೆ ಒಂದು ಶಿಖೆ; ತಲೆತಲಾಂತರದಿಂದಲೂ ಕೈಯಲ್ಲಿ ಕತ್ತಿ ಹಿಡಿದವರಿಂದಲೇ ವಪನ, ಗುಂಡಂಚಿನ ಪಂಚೆ, ಮಡ್ಡಿ ನಶ್ಯ, ಸಾಲುಗುಂಡಿಯ ಆಜಾನುಅಂಗಿ, ಹನ್ನೆರಡು ಮೊಳದ ಸಿಂಬಿ, ಇವೇ ಅಲಂಕಾರಗಳು. ಅಂಗಿಯ ಹಿಂಭಾಗದಲ್ಲಿ ಬೆನ್ನು ಮೂಳೆಯ ಪ್ರದೇಶದಲ್ಲಿ ಉದ್ದಕ್ಕೂ ಹರಕು; ಏಕೆಂದರೆ ರಂಗಣ್ಣನವರು ಲೀಲಾಜಾಲವಾಗಿ ವಿಶಾಲವಾಗಿ ಬೆಳೆದವರು. ರುಂಡ ಮುಂಡ ಇವೆರಡೇ ಹೊರತು ಅವರ ಅಂಗರಚನೆಯಲ್ಲಿ ಕಂಠವೆಂಬುದೇ ಕಾಣಿಸದು. ಅವರಾಗಿಯೇ ತಲೆ ಎತ್ತಿದರೆ ಅಲ್ಪ ಸ್ವಲ್ಪ ಕಾಣಿಸುತ್ತಿತ್ತೋ ಏನೋ? ಆದರೆ ಆ ಸಾಹಸವನ್ನು ಅವರು ಎಂದಿಗೂ ಮಾಡಿಲ್ಲ. ರಂಗಣ್ಣನವರ ಆಫೀಸ್ ರೂಂನಲ್ಲಿ ಅವರ ತಲೆಯ ಮೇಲೆ ಬಾಲ್ಯಾವಸ್ಥೆಗಳಲ್ಲಿ ಅವರು ತಾಳಿದ ಅವತಾರ ವಿಶೇಷಗಳ ಚಿತ್ರಗಳು ಗೋಡೆಗೆ ಒರಗಿಕೊಂಡು ಬಂದವರನ್ನು ಪಿಳಪಿಳನೆ ನೋಡುತ್ತಿತ್ತು. ಅವುಗಳನ್ನು ಹಾಗೆಯೇ ಸಾಲಾಗಿ ನೋಡುತ್ತಾ ಬಂದರೆ ಅವರ ಜೀವನ ಕೇವಲ ಬೊಜ್ಜು ಜೀವನವೆಂಬುದು ಸ್ಪಷ್ಟವಾಗುವುದು. ಅಂಗಿಯನ್ನು ಗುಂಡಿಸದೆ ಹಾಗೆಯೇ ತೆರೆದಿಟ್ಟದ್ದರಿಂದ ರಂಗಣ್ಣನವರು ಒಳಗೊಂದು ವೆಯಿಸ್ಟ್ ಕೋಟನ್ನು ಬಹಳ ಪ್ರಯಾಸದಿಂದ ತೊಡುತ್ತಿದ್ದರೆಂದು ಗೊತ್ತಾಗುವುದು. ಹೊಟ್ಟೆಯ ಗೋಳಾಕಾರವನ್ನು ತಡೆಯಲಾರದೆ ಆ ಒಳಂಗಿ ಒದ್ದಾಡುತ್ತಿದ್ದದ್ದು ಸರ್ವರಿಗೂ ವೇದ್ಯವಾಗುತ್ತಿತ್ತು. ಅದರ ಬಲಕಿಸೆಯಲ್ಲಿ ಒಂದು ಕರಂಡಕ ಗಡಿಯಾರವನ್ನೂ ಎಡಕಿಸೆಯಲ್ಲಿ ಒಂದು ನಶ್ಯ ಕರಂಡಕವನ್ನೂ ಇರಿಸಿದ್ದರಿಂದ ರಂಗಣ್ಣನವರು ಸಮಾನ ತೂಕವಾಗಿಯೇ ಕೋರ್ಟಿಗೆ ಚಿತ್ತೈಸುತ್ತಿದ್ದರು.

ರಂಗಣ್ಣನವರಿಗೆ ಕಟ್ಟೂ ಜಾಸ್ತಿ; ಕಾಸೂ ಜಾಸ್ತಿ; (ಕಟ್ಟಿದ್ದರೂ ಅನೇಕ ವೇಳೆ ಕಾಸು ಗಿಟ್ಟುವುದಿಲ್ಲವೆಂಬುದು ಲಾಯರುಗಳಿಗೆಲ್ಲ ತಿಳಿದ ವಿಷಯ.) ಮೂರು ರೂಪಾಯಿ ಬಂದರೂ ಅವನ್ನೇ ಮುನ್ನೂರು ಅಂತ ಹೊರಗಡೆ ಹೇಳಿಕೊಂಡು ಬರೀ ಕೈಯನ್ನೇ ಕುಲಕಿ ಬಡಾಯಿ ಕೊಚ್ಚಿಕೊಂಡು ಜಾಣತನದಿಂದ ಕಾಲ

ಕ್ಷೇಪ ಮಾಡಿಕೊಂಡು, ಸಾಲಕ್ಷೇಪವಿಲ್ಲದೆ ಸಂಸಾರ ರಥವನ್ನು ಸಾಗಿಸುತ್ತಿದ್ದರು.

ಇದ್ದುದ್ದರಲ್ಲಿ ರಂಗಣ್ಣನವರನ್ನ ಅನುಕೂಲಸ್ಥರೆಂದೇ ಹೇಳಬೇಕು. ಮನೆಯಲ್ಲಿ ಒಬ್ಬರು ಅಡಿಗೆಯವರು; ಇಬ್ಬರು ಆಳುಗಳು. ಗುಮಾಸ್ತೆಯರು ಬೇರೆ. ತೊಟ್ಟಿ ಮನೆ, ಕುದುರೆ ಗಾಡಿ, ಹಜಾರದ ಮೂಲೆಯಲ್ಲೇ ಹುರುಳಿ ಮೂಟೆಗಳು. ಅಂಗಳದಲ್ಲಿ ಕೆಮ್ಮಣ್ಣು ಕಲಸಿದ ಜೇಳಿ ಕಾಳು, ಹಿತ್ತಿಲಲ್ಲಿ ಪಡವಲ ಚಪ್ಪರ; ಕೊಟ್ಟಿಗೆಯಲ್ಲಿ ಕರಾವಿಗೆ ಬಂದ ಎಮ್ಮೆಗಳು, ಕರು ಸಹಿತ. ಒಟ್ಟಿನಲ್ಲಿ ಸುಖಜೀವನ.

ರಂಗಣ್ಣನವರು ಕೇವಲ ಸ್ವಯಂಭು ಮೂರ್ತಿ, ಲಾಯರಿ ಕೆಲಸದಲ್ಲಿ ಅವರಿಗೆ ಯಾರ ಬೆಂಬಲವೂ ಲಭಿಸಿರಲಿಲ್ಲವಂತೆ. ಅವರ ವಂಶವೃಕ್ಷದ ಒಂದು ಶಾಖೆಯಲ್ಲೂ ಕೂಡ ವಕೀಲಿವೃತ್ತಿಯ ವಾಸನೆಯೇ ಇರಲಿಲ್ಲ. ಆದರೂ ಸ್ವಪ್ರಯತ್ನದಿಂದ ಅವರು ಬೆಳೆದು ಬಲಿಷ್ಠರಾಗಿ ದೊಡ್ಡ ಲಾಯರೆನಿಸಿಕೊಂಡಿರುವುದು ಆಶ್ಚರ್ಯವೇ ಸರಿ. ಅವರ ತಂದೆ ಸ್ಟೇಷನ್ ಮಾಸ್ಟರಾಗಿದ್ದರು ಕೆಂಪು ಹಸುರು ಬಾವುಟ ನೀಡಿದ್ದಕ್ಕೆ ೬೦ ರೂಪಾಯಿ, ಇತರೇ ಜನರೆದುರು ಕೈ ನೀಡಿದ್ದಕ್ಕೆ ೧೦೦ ರೂಪಾಯಿ, ಹೀಗೆ ಅವರಿಗೆ ವರಮಾನ ಬರುತ್ತಿತ್ತು. ಆದರೆ ರಂಗಣ್ಣನವರ ವಿದ್ಯಾಭ್ಯಾಸದ ಖರ್ಚಿಗಾಗಿಯೂ ಒಂದು ಕೇಸಿನ ಖರ್ಚಿಗಾಗಿಯೂ ಅವರು ಗಳಿಸಿದ ಗಂಟೆಲ್ಲ ಕರಗಿ ಹೋಯಿತು. ಒಂದು ಸಾರಿ ಕೆಂಪು ಬಾವುಟಕ್ಕೆ ಬದಲಾಗಿ ಹಸುರನ್ನು ತೋರಿಸಿದ್ದರಿಂದ ಎರಡು ಎಂಜನ್ನುಗಳಿಗೂ ಅನೇಕ ಡಬ್ಬಿಗಳಿಗೂ ಅವುಗಳೊಳಗಿಂದ ಇಳಿಯದೇ ಅಲ್ಲೇ ಕುಳಿತಿದ್ದ ಪ್ರಯಾಣಿಕರಿಗೂ ಅನಾಹುತ ನಡೆದು, ತನ್ನ ತಲೆ ತಪ್ಪಿಸಿಕೊಳ್ಳೋದಕ್ಕೆ ಹೈಕೋರ್ಟು ಹಂತ ಹತ್ತಿ ಹತ್ತಾರು ಸಾವಿರ ರೂಪಾಯಿ ಖರ್ಚು ಮಾಡಿದರು-ರಂಗಣ್ಣನವರ ತಂದೆ.

ಆದ್ದರಿಂದ, ರಂಗಣ್ಣನವರು ಮನೆ ಬಾಗಿಲಲ್ಲಿ ಬೋರ್ಡು ತಗುಲಿಸಿದಾಗ ಅವರಿಗೆ ಎಲ್. ಎಲ್. ಬಿ. ಎಂಬುದೇ ಆಸ್ತಿ! ಇಬ್ಬರು ಚಿ|| ಸೌ|| ಗಳೇ ಪಾಸ್ತಿ! ಅವರಲ್ಲಿ ಕಿರಿಯವಳೇ ಕಲ್ಯಾಣಿ.

(ಎಸ್ ವೀ ವೀ ಕೃತಂ.)

—ನಾ. ಕ.

(ಮುಂದಿನ ತಿಂಗಳು "ವರ ಪಡೆದದ್ದು")

ನವೀನ ಗಾದೆಗಳು—ವೈದ್ಯಕೀಯ

●

ಅಂಬಲಿ ಕುಡಿಸ್ರೊ ಆಸ್ಪತ್ರೇಲಿ
ನೈ ತಿಕ್ಕೋನಬ್ಬ-ನರಸೋಳೊಬ್ಬಳು

* *

ವೈದ್ಯ ಹೊಕ್ಕ ಮನೆಗೆ
ಸುಣ್ಣ ಬೇರೆ ಖರ್ಚು

* *

ಕಂಕುಳಲ್ಲಿ ಶಂಖ ಬಂದರೆ
ಕೈ ಬಾಯಲ್ಲೂ ಶಂಖ

* *

ಸುಲಿಯುಕ್ಕೆ ಬಂದ ವೈದ್ಯನ ಹತ್ತಿರ
ಸುಖ ದುಃಖ ಹೇಳಿಕೊಂಡಹಾಗೆ

* *

"ಕಷಾಯ ಮಂಡು ಮಾತ್ರೇಣ
ವೈದ್ಯಃ ಸರ್ವತ್ರ ಭುಂಜಯೇತ್"
(ಇತಿ ಕೊರವಂಜಿಃ)

* *

ಭೀತಿ ಹಿಡಿಸುಕ್ಕೆ ಆತನ ಕರೆಸಿದರೆ
ಆತಗೆ ದೆವ್ವ ಬಡಿದು ಆರು ತಿಂಗಳಾಯ್ತು

* *

ಹೆಣ ಕೊಯ್ಯುವವನಿಗೆ
ಹೊತ್ತೇನು ಗೊತ್ತು ?

* *

ಮಂಡಿ ನೋವಾದರೆ ದವಡೆ ಹಲ್ಲು ಉದುರಿಸುತ್ತಾರೆ.

* *

ಅಂಗೈ ಹುಣ್ಣ್ನ ಕನ್ನಡೀಲಿ ನೋಡ್ತಾರೆ.

* *

ವೇದನೆ ತಪ್ಪಿಸದ ವೈದ್ಯ.
ಔಷಧಿ ದೂಷಿಸಿದ ಹಾಗೆ.

"ಕೊಂಡೆನಕ ಅಂಚೆಮಾಸ್ತರ"

"ಒಳಗೆ ಯಾರೂ ಪ್ರವೇಶಿಸಕೂಡದು" ಎಂದು ಚೀಟಿ ತಗುಲಿಸಿದ್ದ ಬಾಗಿಲೊಳಗಿಂದ ಅಂಚೆ ಕಛೇರಿಗೆ ಹೋಗಿ ನನ್ನ ಕಾಗದಗಳನ್ನು ತೆಗೆದುಕೊಂಡು ಬರುವ ವಾಡಿಕೆ. ಅಂಚೆಯಮಾಸ್ತರು ನನ್ನ ಬಟ್ಟೆಬರೆಗಳನ್ನು ನೋಡಿ ಷಹರಿನವನೆಂದು ತಿಳಿದು ಈ ರೀತಿ ನನಗೆ ಮರ್ಯಾದೆ ಸಲ್ಲಿಸುತ್ತಿದ್ದರು. ಹಳ್ಳಿಗೆಲ್ಲಾ ಅಂಚೆಯ ಮಾಸ್ತರೇ ದೊಡ್ಡಮನುಷ್ಯ. ಅವನೇ ಹೀಗೆ ನನಗೆ ಮರ್ಯಾದೆಮಾಡಿದಮೇಲೆ ಹಳ್ಳಿಯ ಜನರು ಕೇಳಬೇಕೆ? ಇಡೀ ಕೊಂಡೆನಕಹಳ್ಳಿಯ ಅಂಗಡಿಯವರೆಲ್ಲರೂ ನಾನು ರಸ್ತೆಯಲ್ಲಿ ಬಂದರೆ ಎದ್ದು ಸಲಾಂ ಮಾಡುತ್ತಿದ್ದರು. ಈ ವೈಖರಿಯನ್ನು ಅನುಭವಿಸುತ್ತಿದ್ದೆ ನಾನು, ಕೊಂಡೆನಕಹಳ್ಳಿಗೆ, ವಿರಾಮವಾಗಿ ಕೆಲವು ದಿನಗಳು ಹೋಗಿ, ಅಲ್ಲಿ ವ್ಯಾಕರಣದಮೇಲೆ ಒಂದು ಪುಸ್ತಕವನ್ನು ಬರೆಯಲು ಉದ್ಯುಕ್ತನಾಗಿದ್ದಾಗ.

ಮೊನ್ನಿನ ದಿನ ಅಂಚೆ ಕಛೇರಿಗೆ ಹೋದರೆ, 'ಒಳಗೆಯಾರೂ ಪ್ರವೇಶಿಸಕೂಡದು' ಬಾಗಿಲು ಭದ್ರವಾಗಿ ಹಾಕಿದ್ದಿತು. ಕಿಟಿಕೆಯೊಳಗಿನಿಂದ ನೋಡಿದೆ. ಬೇರೆ ಅಂಚೆಮಾಸ್ತರು. ಅವನೇನೂ ನನ್ನ ಬಟ್ಟೆಬರೆಗಳನ್ನು ನೋಡಿ ನನ್ನ ಇಂಗ್ಲೀಷ್ ಮಾತಿಗೆ ಮೋಹಗೊಂಡು, ಆ ಬಾಗಿಲನ್ನು ತೆಗೆದು 'ಒಳಗೆಬನ್ನಿ' ಎನ್ನಲಿಲ್ಲ. ಹಾಗಾಗಿ ಕಿಟಕಿಯ ಮೂಲಕವೇ ನನ್ನ ಕಾರ್ಯವನ್ನೆಲ್ಲಾ ಮುಗಿಸಬೇಕಾಯಿತು. ಇದು ಹೇಗೋ ಹಳ್ಳಿಯವರಿಗೆಲ್ಲಾ ತಿಳಿಯಬಂತು. ಆ ಮೇಲೆ ನಾನು ಹಾದಿಯಲ್ಲಿ ಹೋದರೆ ಯಾವ ಅಂಗಡಿಯವನೂ ಎದ್ದು ನಿಲ್ಲುತ್ತಿರಲಿಲ್ಲ. ಎದ್ದು ನಿಲ್ಲುವುದಿರಲಿ ಕೇವಲ ಸಲಾಮನ್ನೂ ಮಾಡುತ್ತಿರಲಿಲ್ಲ. ನನ್ನ ಅಂಗಿ ಷರಾಯಿ, ನೆಕ್‌ಟೈಗಳೆಲ್ಲಾ ವ್ಯರ್ಥವಾಯಿತು. ತಲೆಯ ಅಂದದ ಕ್ರಾಪು, ಆಂಗ್ಲೇಯ ತರವಾದ ಮಾತು ಇವುಗಳೆಲ್ಲವೂ ನಿರರ್ಥಕವಾದುವು. ಬೆಂಗಳೂರು ದಂಡಿನಲ್ಲಿ ಕಲಿತ ಚಾಕಚಕ್ಯಗಳೆಲ್ಲಾ ನೀರಿನಲ್ಲಿ ಹೋಮಮಾಡಿದಂತಾಯ್ತು. ಹೊರಗೆ ಬಂದರೆ ಅಲ್ಲವೇ ಈ ಅವಮಾನ. ಅಂದಮೇಲೆ ಮುಸಾಫರಖಾನೆಯನ್ನು ಬಿಟ್ಟುಬರದೆ ಅಲ್ಲಿಯೇ ನನ್ನ ಪುಸ್ತಕವನ್ನು ಪೂರೈಸಿ ಕತ್ತಲಾಗುತ್ತಲೂ ಗಾಳಿ ಸಂಚಾರಕ್ಕೆಂದು ಹೋಗಿ ಬರುವುದು, ಜವಾನನ ಕೈಯಲ್ಲಿ ಅಂಚೆ ಕೆಲಸ ಮಾಡಿಸುವುದು, ಎಂದು ಮನಸ್ಸಿನಲ್ಲಿಯೇ ನಿರ್ಧರಿಸಿ ಹಾಗೆಯೇಮಾಡತೊಡಗಿದೆ.

ಇದಾದ ಕೆಲವು ದಿನಗಳಾದ ಮೇಲೆ ಬೆಳಿಗ್ಗೆ ಒಂಬತ್ತು ಗಂಟೆಯ ಹೊತ್ತಿಗೆ, ಆಗತಾನೇ ಎದ್ದು ಹಜಾರದಲ್ಲಿ ಪೈಪುರಿಯುತ್ತಿದ್ದಾಗ, ಹೊರದಲ್ಲಿ ಯಾರೋ ಮುಸಾ

ಫರಖಾನೆಯ ಕಡೆಗೇ ಬರುತ್ತಿದ್ದರು. ಸ್ವಲ್ಪ ಹತ್ತಿರ ಬಂದಮೇಲೆ ಅಂಚೆಯಮಾಸ್ತರೆಂದು ಗೊತ್ತಾಯಿತು—ಹೊಸಮಾಸ್ತರು. ಅಂಚೆ ಕಛೇರಿಗೆ ಹೋದರೆ ಗುರ್ತಿಸಿ ಮರ್ಯಾದೆಮಾಡದವರು ಈಗ ನನ್ನಬಳಿಗೇ ಬರಲು ಏನೇನೋ ಮಹತ್ಕಾರಣವಿರಬೇಕು. ಇದು ಯಾವ ಅನಿರೀಕ್ಷಿತ ಅದೃಷ್ಟ ? ಅಲ್ಲವೇ ಯಾವುದಾದರೂ ನಷ್ಟಪೈಡು ಕಾಗದತರುತ್ತಿರುವರೊ? ಏನೇನೋ ಯೋಚನೆಗಳು ಮೂಡಿದುವು. ಉತ್ತರ ಮನಸ್ಸಿಗೆ ಹೊಳೆಯುವ ಮೊದಲೇ ಅಂಚೆಮಾಸ್ತರೇ ಹತ್ತಿರಬಂದರು. ದೊಡ್ಡದಾಗಿ ವಿನಯದಿಂದ ತಲೆಬಾಗಿ ನಮಸ್ಕರಿಸಿ, "ಸ್ವಾಮಿ ತಮಗೊಂದು ಕಾಗದ ಬಂದಿದೆ. ಅದನ್ನು ಕೊಡಲೋಸುಗ ನಾನೇ ಬಂದೆ." ಎಂದು ನನ್ನ ಕೈಗೆ ಆ ಕಾಗದವನ್ನುಕೊಟ್ಟು ತಿರುಗಿ ತಲೆಬಾಗಿ ನಮಸ್ಕರಿಸಿ ಮುಖದಮೇಲೆ ಅಗಲವಾದ ನಗೆಯನ್ನು ತೋರುತ್ತಾ ಹಿಂತಿರುಗಿಹೋದರು !

ಇದು ಏನು ಆಶ್ಚರ್ಯ ! ಇಷ್ಟುಮಟ್ಟಿಗೆ ನನ್ನನ್ನು ಗೌರವಿಸಲು ಕಾರಣವಾದ ಈ ಕಾಗದವಾವುದು ಎಂದುನೋಡಿದೆ. ಲಕ್ಕೋಟೆಯಮೇಲೆ ಅರಮನೆಯ ಗುರ್ತಿದ್ದಿತು. ಮಹಾರಾಜರ ಕಡೆಯ ಕಾಗದ ಎಂದು ಎಲ್ಲರಿಗೂ ತಿಳಿಯುವಂತೆ ರಾಜಚಿಹ್ನೆಯು ಲಕ್ಕೋಟೆಯಮೇಲೆ ಮುದ್ರಿತವಾಗಿದ್ದಿತು. ಆಗ ತಿಳಿಯಿತು ಈ ವಿಶೇಷಗೌರವಕ್ಕೆ ಕಾರಣ.

ಕಾಗದ ಒಡೆದು, ಓದಿದೆ.

ಶ್ರೀ............ರವರಿಗೆ. ವಂದನೆಗಳು.

ಶ್ರೀಮನ್ಮಹಾರಾಜರವರ ಆಜ್ಞೆಯಂತೆ ಈಕಾಗದವನ್ನು ತಮಗೆ ಬರೆದಿರುತ್ತೇನೆ. ತಮ್ಮ ಪುಸ್ತಕವನ್ನು ಶ್ರೀಮನ್ಮಹಾರಾಜರಿಗೆ ಅರ್ಪಿಸಬೇಕೆಂದು ಕೋರಿದ್ದೀರಿ. ವ್ಯಾಕರಣದ ಪುಸ್ತಕಕ್ಕೆ ಆಶ್ರಯದಾತರಾಗಲು ಶ್ರೀಮನ್ಮಹಾರಾಜರು ಒಪ್ಪಿಗೆಯನ್ನು ಕೊಡಲು ಆಶಿಸುವುದಿಲ್ಲ. ಹಾಗಾಗಿ ತಿಳಿಸಬೇಕೆಂದು ಹುಜೂರ್ರವರು ಹುಕುಂ ಮಾಡಿದ್ದಾರೆ.

ಇತಿ ನಿಮ್ಮ,

ಅರಮನೆಯಭಕ್ಷಿ. ಎಂದು ಸಹಿ ಇತ್ತು.

ಕಾಗದದ ವಿಷಯವನ್ನು ಗೋಪ್ಯವಾಗಿಯೇ ಇಟ್ಟುಕೊಂಡೆ. ಯಾರಿಗೂ ತಿಳಿಯದಂತೆ ಕಾಗದವನ್ನು ಮರೆಸಿಟ್ಟು ಲಕ್ಕೋಟೆಯನ್ನುಮಾತ್ರ ಮೇಜಿನಮೇಲೆ ಇಟ್ಟೆ. ಸಾಯಂಕಾಲ ನಾಲ್ಕು ನಾಲ್ಕುವರೆ ಗಂಟೆಗೆ ಅಂಚೆ ಕಛೇರಿಗೆ ಹೋದೆ. ರಸ್ತೆಯುದ್ದಕ್ಕೂ ಹಳ್ಳಿಯ ಅಂಗಡಿಯವರೆಲ್ಲರೂ ಎದ್ದೆದ್ದು ನಮಸ್ಕಾರ ಮಾಡಿದರು. ದೂರದಿಂದಲೇ ನನ್ನನ್ನು ಕಂಡು ಅಂಚೆಯಮಾಸ್ತರು ರುಮಾಲು ಸರಿಮಾಡಿಕೊಂಡು

'ಅಪ್ಪಣೆಇಲ್ಲದೆ ಒಳಗೆ ಬರಕೂಡದು' ಬಾಗಿಲನ್ನು ತೆರೆದು ಸಿದ್ಧವಾದರು. ನಾನು ಹೋಗುತ್ತಲೂ ಎದ್ದು ಬಂದು ಒಳಕ್ಕೆ ಬರಮಾಡಿಕೊಂಡು ನನ್ನ ಕೆಲಸವನ್ನು ಮೊದಲು ಪೂರೈಸಿದರು.

ಹಿಂತಿರುಗಿ ಬರುವಾಗಲೂ ರಾಜಮರ್ಯಾದೆ ನನಗೆ! ಮುಸಾಫರಖಾನೆಗೆ ಬಂದ ಮೇಲೆ, ಇನ್ನೊಂದು ಕಾಗದ ಜವಾನನೊಬ್ಬನು ತಂದಿದ್ದನು. ಅದನ್ನು ಒಡೆದು ನೋಡಿದೆ. ಆ ತಾಲ್ಲೂಕು ಅಮಲ್ದಾರರ ಕಾಗದ. ಅವರು ಈ ಹಳ್ಳಿಯಲ್ಲಿ ಜಮಾ ಬಂದಿಗಾಗಿ ಬಂದಿದ್ದರೆಂತಲೂ ಸುಪ್ರಸಿದ್ಧನಾದ, ಕೀರ್ತಿವಂತನಾದ, ನಾನು ಹಳ್ಳಿಗೆ ವಿಶ್ರಾಂತಿಗೆ ಬಂದಿದ್ದೆನೆಂದು ಅವರಿಗೆ ಸಾಯಂಕಾಲ ತಿಳಿಯಿತೆಂದೂ ನನ್ನ ಭೆಟ್ಟಿಗಾಗಿ ರಾತ್ರಿ ಏಳು ಗಂಟೆಗೆ ಬರಲು ಆಶೆಯೆಂದೂ, ನನಗೆ ಸೌಕರ್ಯ ಉಂಟೇ ಅವರನ್ನು ನೋಡಲು ಎಂದೂ ಬರೆದಿದ್ದರು.

ರಾತ್ರಿ ಏಳು ಗಂಟೆಗೆ ಸೌಕರ್ಯಮಾಡಿಕೊಂಡು ಅವರನ್ನು ಕರೆಸಿದೆ. ಏನೇನೋ ಮಾತನಾಡಿದರು ರಾಜಕೀಯದ ವಿಚಾರ. ನಾನೂ ವ್ಯಾಕರಣದ ವಿಚಾರ ಏನೇನೋ ಹೇಳಿದೆ. ಪರಸ್ಪರವಾಗಿ ಒಬ್ಬರಿಗೂ ಏನೂ ಅರ್ಥವಾಗಲಿಲ್ಲ. ಒಮ್ಮ ನಸ್ಸಿನಿಂದ ಭೇಟಿಮುಗಿಸಿದೆವು. ಅವರೂ ಹಿಂತಿರುಗಿದರು.

ಅಂದಿನಿಂದ ಆ ಹಳ್ಳಿಯಲ್ಲಿದ್ದ ಒಂದು ತಿಂಗಳೂ ನಾನು ರಾಜಮರ್ಯಾದೆ ಯನ್ನೂ, ಅರಸನ ಸೊಗಸನ್ನೂ ಅನುಭವಿಸಿದೆ.

ನೀತಿಯ ಕತೆಗಳು-ಬಲಿತವರಿಗೆ

ಕತೆ ಕಾಡಿಗೆ ಹೋಗಿ ಮಳೆ ಊರಿಗೆ ಬರುತ್ತಿದ್ದ ಕಾಲವಲ್ಲಿ ಒಂದು ದಿನ ಒಬ್ಬ ನ್ಯಾಯಾಧೀಶನು ನ್ಯಾಯಸ್ಥಾನದಲ್ಲಿ ತನ್ನ ಒಡ್ಡೋಲಗವನ್ನು ನಡೆಸುತ್ತಿದ್ದನು. ಆ ಬೆಳಿಗ್ಗೆ ಆತನು ಜಿಂಕೆಯ ಥಂಗುವಿಕೆಯನ್ನನುಸರಿಸಿ ಮಿಂಚಿನ ವೇಗವನ್ನು ಮೀರಿ ಹಾದಿಯಲ್ಲಿ ಮೋಟಾರೊಂದನ್ನು ತಪ್ಪಿಸಿಕೊಂಡು ಬಂದಿದ್ದನು. ಹಾಗಾಗಿ ಭೀಮಕಾಯನಾದ ನ್ಯಾಯಾಧೀಶನ ಮನಸ್ಸು ಮೋಟಾರುಗಳ ಮೇಲೆ ತೀವ್ರವಾಗಿದ್ದಿತು.

ನ್ಯಾಯಾಸ್ಥಾನದಲ್ಲಿ ಪೋಲೀಸಿನವರು ಅಜಾಗರೂಕತೆಯಿಂದ ಮೋಟಾರು ನಡೆಸಿದರೆಂಬ ಆಪಾದನೆಯ ಮೇಲೆ ಮೂವರು ತಪ್ಪಿತಸ್ಥರನ್ನು ಶಿಕ್ಷೆಗಾಗಿ ಕರೆತಂದರು. ಮೂವರೂ ಮದ್ಯಪಾನ ಮಾಡಿದರೆಂದೂ, ಹಾಗಾಗಿ ವಾಹನವನ್ನು ಡೊಂಕು ಡೊಂಕಾಗಿ ನಡೆಸಿದರೆಂದೂ, ಒಬ್ಬ ಮುದುಕನ ಕಾಲೂ, ಎರಡು ಕೋಳಿಗಳೂ ಒಂದು ಗೋಡೆಯೂ ಮುರಿದು ಹೋದುವೆಂದೂ ಆಪಾದನೆಯು ಹೊರಿಸಲ್ಪಟ್ಟಿತು.

ಮೊದಲನೆಯ ಆಪಾದಿತನಂದನು, "ಮಹಾಸ್ವಾಮಿ, ನಾನು ದಂತಚಿಕಿತ್ಸೆಗಾಗಿ ಹೋದವನು ವೈದ್ಯನ ಹತ್ತಿರ ಕೊಕೇನ್ ಇನ್‌ಜಕ್ಷನ್ ತೆಗೆದುಕೊಂಡಿದ್ದೆ. ಆ ಕಾರಣದಿಂದ ಮನಸ್ಸು ಚಪಲಗೊಂಡಿತ್ತೇ ವಿನಹಾ ಮದ್ಯಸೇವನೆಯಿಂದಲ್ಲ."

ಎರಡನೆಯವನಂದನು, "ನೇತ್ರ ಚಿಕಿತ್ಸೆಗೆ ಹೋದವನು ನಾನು ಅಲ್ಲಿ ಅಟ್ರೋಪೀನ್ ದ್ರಾವಕದ ಪ್ರಯೋಗಮಾಡಿದರು. ಅಂತಾಗಿ ಮನಸ್ಸು ಸಡಿಲಿತ್ತೇ ವಿನಹಾ ಮದ್ಯದಿಂದಲ್ಲ".

ಮೂರನೆಯವನಂದನು, "ನಮ್ಮ ದಾಯಾದಿಯ ನೆಂಟನು ಕಾಲು ಉಳುಕಿನಿಂದ ಬೇನೆಪಡುತ್ತಿದ್ದನು. ಆತನನ್ನು ನೋಡಿದ ಮೇಲೆ ವ್ಯಾಕುಲತೆಯಿಂದ ಮನಸ್ಸೇ ನಿಸ್ಸಾರವಾಗಿತ್ತು. ಖಂಡಿತವಾಗಿಯೂ ಮದ್ಯಪಾನದಿಂದಲ್ಲ."

ನ್ಯಾಯಾಧೀಶನು ಮೂವರನ್ನೂ ನೋಡಿದನು, ಬೆಳಿಗ್ಗೆ ತಾನು ಥಂಗಿಸಿದುದನ್ನೂ, ವಾತರಾವಣವಂತೆ ಬಂದ ಮೋಟಾರನ್ನೂ ನೆನೆದನು, ತನ್ನ ಎದೆಯು ಬಡಿದುಕೊಂಡಿದ್ದನ್ನೂ, ಹೊಟ್ಟೆಯು ಹೊಡೆದುಕೊಂಡಿದ್ದನ್ನೂ ಜ್ಞಾಪಿಸಿಕೊಂಡನು. ಕ್ರೂರವೃಷ್ಟಿಯನ್ನು ಮೂವರ ಮೇಲೆಯೂ ತೋರಿ ಮೂರು ಮೂರು ಸಾವಿರ ರೂಪಾಯಿ ಜುಲ್ಮಾನೆ ಹಾಕಿದನು.

ಇವೆಲ್ಲವನ್ನೂ ನಾಲ್ಕನೆಯ ಆಪಾದಿತನು ನೋಡಿದನು. ನಾಲ್ಕನೆಯ ಆಪಾದಿತನು ಕಾಲುಮಾರ್ಗದಲ್ಲಿ ನಡೆಯಲಿಲ್ಲವೆಂದೂ ಮೋಟಾರುಹಾದಿಯಲ್ಲಿ ಹೋಗಿ

ಮೋಟಾರುಗಳಿಗೆ ಕಷ್ಟಕೊಟ್ಟನೆಂದೂ ಪೋಲಿಸಿನವರು ತಪ್ಪು ಹೊರಿಸಿದ್ದರು. ನಾಲ್ಕನೆಯ ಆಪಾದಿತನ ವಿಚಾರಣೆಯು ಆರಂಭಿಸಿ ಪೋಲೀಸಿನವರು ತಮ್ಮ ರುಜುವಾತನ್ನು ಹೇಳಿದರು. ಆಗ ಆಪಾದಿತನು ಬೇರೊಂದು ಮಾರ್ಗವನ್ನೂ ಕಾಣದೆ ತನ್ನ ಹೇಳಿಕೆಯನ್ನು ಈ ರೀತಿ ಹೇಳಿಕೊಂಡನು.

"ಮಹಾಸ್ವಾಮಿ, ನಾನು ಅಂದು ಮದ್ಯಪಾನವನ್ನು ಮಾಡಿದ್ದೆ ಮನಸ್ಸು ನನ್ನ ಹತೋಟಿಮಾರಿ ಮುಂದುವರಿದಿತ್ತು. ಕಾಲು ಹಾದಿಯಾವುದೊ ಮೋಟಾರು ಹಾದಿಯಾವುದೋ ನನಗೆ ತಿಳಿಯಲಿಲ್ಲ. ಕಾಲು ಹೋದ ಹಾದಿ ಕಾಲುಹಾದಿ ಎಂದು ನಡೆದೆ, ತಪ್ಪು ಕ್ಷಮಿಸಬೇಕು" ಎಂದ.

ನ್ಯಾಯಾಧೀಶನಿಗೆ ಸಹಜವಾದ ಮೈತ್ರಿ ತೋರಿತು. "ನ್ಯಾಯಸ್ಥಾನದ ಗೌರವಕ್ಕೆ ತಕ್ಕಂತೆ ನೀನು ಹೇಳಿದುದೆಲ್ಲಾ ಸುಳ್ಳೆಂದು ನಾವು ಪ್ರತಿಭಟಿಸಲೇ ಬೇಕು. ಹಾಗಾಗಿ ನೀನು ಮದ್ಯಪಾನವನ್ನು ಮಾಡಿಯೂ ಇರಲಿಲ್ಲ, ಮೋಟಾರುಹಾದಿಯಲ್ಲಿ ನಡೆಯಲೂ ಇಲ್ಲ ಎಂದು ವ್ಯಸನದಿಂದ ಹೇಳಬೇಕಾಗಿದೆ. ಅಂದಮೇಲೆ ಶಿಕ್ಷೆಯನ್ನು ಕೊಡಲೂ ಸಾಧ್ಯವಿಲ್ಲ, ನಿನ್ನನ್ನು ಖುಲಾಸೆಮಾಡಿದ್ದೇವೆ."

ನೀತಿ. ಕೆಲವು ವೇಳೆ—ಬೆಳ್ಳಗಿರುವುದು ಹಾಲಾಗಿಯೂ—ಸತ್ಯವು ಸಹಕಾರಿಯಾಗಿಯೂ ಪರಿಣಮಿಸುವುದು.

ಸಮರಜ್ಞಾನ ಪದಗಳು

ಜರ್ಮನನಿಗೆ ಬುದ್ಧಿಯನು ನೂರ್ಕಾಲ ಹೇಳಿದರೆ
ಫೋರ್ಕಲ್ಲ ಮೇಲೆ ಬಾಂಬುಗರೆದರಾ ಕಲ್ಲು
ಮರುಗಲಹುದೇ ಸಮರಜ್ಞ ।

ಕೋಪ ಮದ್ದಿದ್ದವನ ಮೊಗವು ಮುದ್ದು ಬರುವಂತಿಕ್ಕು
ಆನಿಲ್ಲದವನ ಮೊಗವು ಹಾಳೂರ
ಹದ್ದಿನಂತಿಕ್ಕು ಸಮರಜ್ಞ ।

ಲಂಚ ಬೇಡೆಂದವನ ಸಂಚಯನ ಮಾಡಬೇಕು
ಕಂಚಿ ವರದನು ಕೂಡ ಪೂಜಾರಿಗೆ ಲಂಚ ಕೊಟ್ಟಲ್ಲವೇ
ಬದುಕಿಹುದು ಸಮರಜ್ಞ ।

ಧೈರ್ಯ ಎನ್ನದೆನಬೇಡ ಶೌರ್ಯ ಎನ್ನದೆನಬೇಡ.
ಫೌಡು ಹಿಂತಿರುಗಿ ನಡೆವಾಗ ಸೈನಿಕನೇ ನೀನೋಡಿ
ಬಂದೊಡೇ ಒಳಿತು ಸಮರಜ್ಞ ।

ಸೈನ್ಯವನು ಸೇರ್ವಾಗ ಪಾಲೋಗರುಂಡಂತೆ
ಸೈನ್ಯವನು ಬಿಟ್ಟಾಗ ಚಪ್ಪಲಿಯ
ಉಂಗುರವು ಕಿತ್ತಂತೆ ಸಮರಜ್ಞ ।

"ಒಂದು ರಾತ್ರಿಯ ಕತೆ"

●

"ನಗಿಸುವ ಕತೆಗಳನ್ನು ನೀವೂ ಬರೆಯಬಾರದೇ ಅಂದ್ರೆ"

"ಸರಿ. ಬರೆಯುವವರಿಗೆ ಬೇರೆ ಕೆಲಸವಿಲ್ಲ. ಸುಮ್ಮನೆ ಕೂತರೆ ಮನೆಯಲ್ಲಿ ಹೆಂಡತಿ ಮಕ್ಕಳು ಕಾಡುತ್ತಾರೆ. ಅದನ್ನು ತಪ್ಪಿಸಿಕೊಳ್ಳಲು ಅವರು ಏನೇನೊ ಬರೆಯುವುದಕ್ಕೆ ಶುರುಮಾಡುತ್ತಾರೆ. ನಾನ್ಯಾಕೆ ಹಾಗೆ ಮಾಡಲಿ.''

"ಬರೆಯುಕ್ಕೆ ಬರದೆ ಇದ್ದರೆ ಇದೆಲ್ಲಾ ನೆಪ. ನನ್ನೆದುರಿಗೆ ಸುಮ್ಮನೆ ಕೊಚ್ಚುಕೊಳ್ಳುತ್ತೀರಿ. ಅವನು ಹಾಗೆ ಬರೆದ ಇವಳು ಹೀಗೆ ಬರೆದಳು. ಇಬ್ಬರಿಗೂ ಮೆದುಳೇ ಇಲ್ಲ. ಬರೆಯುವ ಬದಲು ಓದಬಾರದೆ? ಹೀಗೆಲ್ಲಾ! ನೀವು ಓದಿದವರು ಬರೆಯಿರಿ ನೋಡೋಣ".

"ಯಾವ ವಿಚಾರ ಬರೆಯಲಿ? ಹಾಸ್ಯದ ಕತೆ ಬರೆಯಲೆ? ಏನೇನಿರಬೇಕು ಕತೆಯಲ್ಲಿ, ಶೃಂಗಾರವೇ, ಭಕ್ತಿಯೇ ನೀನು ಹೇಳು".

"ರಾತ್ರಿ ಹೊತ್ತು ತಂಪಾಗಿ ಕೂತುಕೊಂಡು ಬರೆದರೆ ಯೋಚನೆಗಳು ಚೆನ್ನಾಗಿ ಬರುತ್ತವೆ. ಪ್ರಸಿದ್ಧ ಲೇಖಕರೆಲ್ಲಾ ರಾತ್ರಿಯೇ ಬರೆಯುತ್ತಾರಂತೆ. ನೀವೂ ಹಾಗೆಯೇ ಬರೆಯಿರಿ, ಈ ಕಾಗಮ್ಮ ಬುಳ್ಳಮ್ಮನ ಪುಸ್ತಕ ಓದೋ ಬದಲು ಒಂದುರಾತ್ರಿ ಬರೆಯಲು ಶುರುಮಾಡಿ. ಮನೆಯವರಿಗೆಲ್ಲಾ ಮನಸ್ಸು ಸಂತೋಷವಾಗುವಂತಹ ವಿಷಯ ಬರೆಯಿರಿ. ನಗುವಿನ ಹಿಂದೆಯೇ ಸ್ವಲ್ಪ ದುಃಖವೂ ಬರುವಂತೆ ಇರಬೇಕು. ತುಂಬಾ ದೊಡ್ಡ ಕತೆ ಬರೆಯಬೇಡಿ, ಯಾರಿಗೂ ಓದುವುದಕ್ಕಾಗುವುದಿಲ್ಲ, ಒಂದೆರಡು ಚಿತ್ರ ಇದ್ದರೆ ಒಳ್ಳೆಯದು. ಬರೆಯುವ ಮೊದಲು ನಿಮ್ಮ ದೇವರ ಹೆಸರನ್ನು ಬರೆದು ಆಮೇಲೆ ಲೇಖನವನ್ನು ಆರಂಭಿಸಿ",

ಈ ಮಾತುಗಳು ಮುಗಿದಾಗ ರಾತ್ರಿ ಒಂಭತ್ತುಗಂಟೆ. ನನಗೆ ಅಕ್ಕಿರೊಟ್ಟಿಯಮೇಲೆ ಏಕೊ ಮನಸ್ಸು ತಿರುಗಿತು. ಆಗ ಹೇಳಿದೆ "ನೋಡೇ, ಇವತ್ತು ರಾತ್ರಿ ಕೂತುಕೊಂಡು ಒಂದು ಹಾಸ್ಯದ ಕತೆ ಅಥವಾ ಹರಟೆ ಅಥವಾ ಚಟಾಕೆಯನ್ನೇ ಬರೆಯುತ್ತೇನೆ. ನಿಮಗೆಲ್ಲಾ ಮನಸ್ಸು ಸಂತೋಷವಾಗುವಂತೆ ಮಾಡುತ್ತೇನೆ. ಇಷ್ಟು ದಿವಸವೂ ಲಾಯರ ಕೆಲಸಮಾಡಿದಾಕ್ಷಣ ಕಲಾವಿದ್ಯೆಯನ್ನು ಮರೆತಿದ್ದೇನೆಂಬುದು ಸುಳ್ಳೆಂದು ತೋರಿಸುತ್ತೇನೆ. ಆದರೆ ನನಗೆ ಅಕ್ಕಿರೊಟ್ಟಿಯ ಮೇಲೆ ಭ್ರಾಂತು ಹಿಡಿದಿದೆ. ಆ ರೊಟ್ಟಿ ಮಾಡಿ ಮಾವಿನಕಾಯಿ ಉಪ್ಪಿನಕಾಯಿ

ರಸ ಸ್ವಲ್ಪ ಬೆಣ್ಣೆ ಕೊಡು. ನಾಳೆ ಬೆಳಿಗ್ಗೆ ನಿನಗೆ ಆ ಲೇಖನವನ್ನು ಕೊಡದಿದ್ದರೆ ನೋಡು ನೀನು ಹೇಳಿದ ಶಿಕ್ಷೆ ಅನುಭವಿಸುತ್ತೇನೆ ''

ಹಾಗೆ ಆಗಲೆಂದು ಅಡಿಗೆಯ ಮನೆಗೆ ಆಕೆ ಹೋದಳು,

*　　　*　　　*

ಹೊರಗಡೆ 'ಝುರ‍್ರೋ' ಎಂತಲೋ 'ಮರ‍್ರೋ' ಎಂತಲೋ ಮಳೆ ಹೊಯ್ಯುತಿತ್ತು. ಪೈರು ಪಚ್ಚೆ ಇರುವ ಹೊಲ ಹಳ್ಳಿಗಳಲ್ಲಿ ಈ ಹಾಳು ಮಳೆ ಬರುವುದೇ ಇಲ್ಲ. ನಾವಿರುವ ಸೋರುವಮನೆಗಳಿರುವ, ಕೊಚ್ಚೆಯಾಗುವ ರಸ್ತೆಗಳ, ಷಹರಿನ ಮೇಲೆ ಬಿದ್ದು ಬಿದ್ದು ಗೋಳಿಡುತ್ತವೆ. ಈ ಮಳೆಯ ಕಾಟದಿಂದಲೇ ನಾನು ಬೇಗ ಮನೆಗೆ ಬಂದಿದ್ದುದು. ಇಲ್ಲದಿದ್ದರೆ ಎಲ್ಲೋ ಸಿನಿಮಾ ನೋಡಿಕೊಂಡು, ಇಲ್ಲವೇ ಕಾಡಹರಟೆ ಹೊಡೆದುಕೊಂಡು ರಾತ್ರಿ ಒಂಭತ್ತು ಗಂಟೆಗೆ ಮನೆಗೆ ಬಂದು ಬೇಗ ಬೇಗ ಊಟಮಾಡಿ ಮಲಗುತ್ತಿದ್ದೆ. ಇವತ್ತು ಮಳೆಯ ಬಿಸೆಯಿಂದ ಮನೆಗೆ ಎಂಟು ಗಂಟೆಗೆ ಬಂದು ಈ ಸಂಭಾಷಣೆಯನ್ನು ನಡೆಸಿ, ಲೇಖನ ಬರೆಯಲು ಒಪ್ಪಿಕೊಂಡಿದ್ದೆ. ಅಕ್ಕಿ ರೊಟ್ಟಿ ಆಗುವತನಕ ಯೋಚನೆ ಮಾಡೋಣ ಎಂದು ಏನೇನೊ ಹೇಗೇಗೊ ಯೋಚನೆ ಮಾಡಿದೆ ಸಾಗಲಿಲ್ಲ. ಅಷ್ಟುಹೊತ್ತಿಗೆ ಅಕ್ಕಿ ರೊಟ್ಟಿ ಸಿದ್ಧ ಎಂದು ಸುದ್ದಿ ಬಂತು. ಒಳಗೆಹೋಗಿ ರೊಟ್ಟಿ ಉಪ್ಪಿನಕಾಯಿರಸ ಬೆಣ್ಣೆಗಳನ್ನು ತಕ್ಕಮಟ್ಟಿಗೆ ತುಷ್ಟಿಯಾಗುವಂತೆ ತಿಂದೆ, ಮಧ್ಯಾಹ್ನದ ಆಲೂಗಡ್ಡೆ ಈರುಳ್ಳಿ ಹುಳಿಯ ಜತೆಗೆ ಸೇರಿಸಿಕೊಂಡು ಇನ್ನೆರಡು ಚೂರು ತಿಂದೆ. ಸಮಾಧಾನಚಿತ್ತದಿಂದ ಹೊರಕ್ಕೆ ಬಂದು, ಇನ್ನೇನು ಲೇಖನ ಬರೆಯೋಣ ಎಂದು ಕುಳಿತರೆ ಕಣ್ಣು ಎಳೆದುಕೊಂಡು ಬಂತು. ಕೂತಿದ್ದಲ್ಲೇ ನಿದ್ರೆಯೂ ಬಂತು.

*　　　*　　　*　　　*

ನಿದ್ರೆಯ ಮೊದಲನೇ ಝಾಮದಲ್ಲೇ ಏನೇನೋ ಕನಸುಗಳು. ನನ್ನ ಹೊಟ್ಟೆಯಮೇಲೆ ಜರ್ಮನರೆಲ್ಲರೂ ಸಂಗ್ರಾಮಮಾಡಿದಂತೆ, ಟ್ಯಾಂಕುಗಳನ್ನು ಓಡಿಸಿದಂತೆ ತೋರಿತು,

ಈ ಇಂಗ್ಲೀಷ್ ಪತ್ರಿಕೆಗಳಲ್ಲಿ ಹೇಳುವ ಇಕ್ಕಳದ ಸಂಗ್ರಾಮ ಕಾರ್ಯಾಚರಣೆಯು ನನ್ನ ದೇಹದಮೇಲೆ ನಡೆದಂತೆ ಕಾಣಿಸಿತು. ವಿಮಾನಧಾಳಿಯ ಭಯಂಕರ ಶಬ್ದವೆಲ್ಲವೂ ಕರುಳಿನಲ್ಲೇ ಕಂಡಿತು. ಹಿರಣ್ಯಕಶಿಪುವಿಗೆ ಆದ ಸಂಕಟವನ್ನೆಲ್ಲಾ ನಾನು ಅನುಭವಿಸಲು ಆರಂಭವಾಯಿತು. ಇನ್ನೇನು ಇನ್ನೆರಡು ನಿಮಿಷಗಳೊಳಗೆ ಪ್ರಾಣವೂ ಹೋಗುತ್ತೆಂಬಂತೆ ತೋರಿತು. ದೂರದಲ್ಲೇ ವೈದ್ಯನು ಬಂದಂತೆ ಕಾಣಿಸಿತು. ಅವನ ಹಿಂದೆಯೇ ಯಥಾಪ್ರಕಾರ ಸಿದ್ದೀಕಟ್ಟೆಯ ಸಿಬ್ಬಂದಿ

ಗಳೂ ಬಂದರು. ಓಹೋ! ಎಲ್ಲವೂ ಮುಗಿಯಿತು. ಬದುಕುವ ಕೊನೇ ಆಶೆಯೂ ಈ ವೈದ್ಯ ಈ ಸಿದ್ದೀಕಟ್ಟೆಯವರ ಆಗಮನದಿಂದ ನಿರಾಶೆಯಾಯಿತು.

ಆವೇಳೆಗೆ ಯಾರೋ ಗಾಳಿಯಲ್ಲಿ ಸವಾರಿಮಾಡಿಕೊಂಡು ಬಂದಂತೆ ಕಾಣಿಸಿತು. ಹತ್ತಿರ ಬರುತ್ತಲೂ ನೋಡಿದೆ. ಯಾಕೋ ನಮ್ಮನೆಯಾಕೆಯೇ ಹಾರಾಡುತ್ತಾ ಬಂದಂತಾಯಿತು. ಆ ಲೇಖನವೆಲ್ಲಿ? ಹರಟೆಯೆಲ್ಲಿ? ಕೊಡು ಈಗ? ಇಲ್ಲದೆ ಇದ್ದರೆ ಸುಮ್ಮನೆ ಬಿಡುವುದಿಲ್ಲ. ಹೊಟ್ಟೆಕುಯ್ದು ರೊಟ್ಟೆ ಕಿತ್ತುಕೊಳ್ಳುತ್ತೇನೆ ಎಂದು ಕೂಗಿದಂತಾಯಿತು.

* * * *

ಎಚ್ಚೆತ್ತೆ. ಮೈಯೆಲ್ಲಾ ಬೆವರಿತ್ತು, ಹೊರಗೆ ಇನ್ನೂ ಮಳೆ, ಗಾಢಾಂಧಕಾರ, ಒಳಗೆ ಒಂದು ಮಸಕುದೀಪ, ಕುರ್ಚಿ, ಕುರ್ಚಿಯಮೇಲೆ ನಿಶ್ಚೇಷ್ಟಿತನಾಗಿ ನಾನು. ಇನ್ನು ಎದೆ ಬಡ ಬಡ ಎಂದು ಹೊಡೆದುಕೊಳ್ಳುತ್ತಿತ್ತು. ಹಿಂದಿನ ರಾತ್ರಿಯ ಮಾತೆಲ್ಲಾ ಜ್ಞಾಪಕಕ್ಕೆ ಬಂತು. ತಿಂಡಿಯ ಹಾವಳಿ ತಿಳಿಯಿತು. ತಿರುಗಿ ನಿದ್ರೆ ಬರುವಂತೆ ಕಾಣಲಿಲ್ಲ, ಹಾಗಾಗಿ ಲೇಖನವನ್ನು ಬರೆಯಲು ಮೊದಲು ಮಾಡಿದೆ. ನಾಲ್ಕು ಹಾಳೆಗಳಲ್ಲಿ ಒಂದೊಂದು ಮಾತು ಒಂದೊಂದು ಪಂಙ್ತಿ, ಒಂದೊಂದು ಹೆಸರು ಬರೆದೆ. ಹಾಸ್ಯದ ಮಾತುಗಳೇ ಬರಲೊಲ್ಲವು. ಹಾಸ್ಯ ಲೇಖಕರಾದರೂ ಏನು ಬರೆಯುತ್ತಾರೆ, ಕಳಿಂಗರಿಗೆ ಕಥಾ ವಸ್ತು ಎಲ್ಲಿ ಸಿಗುತ್ತದೆ. ಅದೇ ಯೋಚನೆ ಆರಂಭವಾಯಿತು. ಲೇಖನವೇನೂ ಸಾಗಲಿಲ್ಲ.

ಆಗ ಒಂದು ಯೋಚನೆ ಹೊಳೆಯಿತು. ಮನೆಯವರಿಗೆ ಸಂತೋಷವಾಗಬೇಕು. ಹಿಂದೆಯೇ ಅಳುವಂತಿರಬೇಕು. ಹಾಸ್ಯಪ್ರಧಾನವಾಗಿರಬೇಕು. ಕಲಾಕೃತಿಯಾಗಿರಬೇಕು. ಸರಿ ಬೇಗ ಬೇಗ ಒಂದು ಲೇಖನವನ್ನು ಬರೆದೆ. ಒಂದೇ ಪುಟದಲ್ಲಿ ಮುಗಿಸಿದೆ. ನನ್ನ ಸಹಿಯನ್ನು ಹಾಕಿದೆ. ನಿರಾಂತಕವಾಗಿ ಮಲಗಿದೆ. ನಿದ್ರೆಮಾಡಿದೆ.

ಬೆಳಗಾಗುತ್ತಲೂ ನನ್ನ ಹೆಂಡತಿ 'ಎಲ್ಲಿ ನಿನ್ನೆ ರಾತ್ರಿ ಅಷ್ಟು ಹೊತ್ತು ದೀಪ ಹಚ್ಚಿಕೊಂಡು ಬರೆಯುತ್ತಿದ್ದರಲ್ಲಾ. ನಾನೂ ಸ್ವಲ್ಪ ಹೊತ್ತು ನೋಡಿದೆ. ನೀವೇನೂ ಮುಗಿಸುವಂತೆ ತೋರಲಿಲ್ಲ. ನಿದ್ರೆ ಬಂತು' ಎಂದಳು.

ರಾತ್ರಿ ಬರೆದ ನನ್ನ ಮರಣಶಾಸನವನ್ನು ಅವಳಕೈಲಿ ಕೊಟ್ಟೆ.

* * * *

ಇನ್ನೂ ನಮ್ಮಿಬ್ಬರ ಮನಸ್ತಾಪ ಹರಿದಿಲ್ಲ, ಆದರೆ ತಿರುಗಿ ಲೇಖನಗಳನ್ನು ಬರೆಯಿರಿ ಎಂದು ಆಕೆ ಕುಮ್ಮಕ್ಕು ಕೊಟ್ಟಿಲ್ಲ. ಕೊಡುವಂತೆಯೂ—ಈ ಜನ್ಮದಲ್ಲಿ—ಕಾಣಿಸಲಿಲ್ಲ.

'ಬ್ಲಾಟಿಂಗ್ ಪ್ಯಾಡ್ ಹುಡುಗ'

"ರಾಮು. ಈ ಹುಡುಗನ್ನ ನೋಡಿದ್ದೀಯಾ''

'ನೋಡಿದ್ದೆ ಕಣೊ. ನಿನ್ನ ಮೇಜಿನ ಮೇಲೆ ಬ್ಲಾಟಿಂಗ್ ಪ್ಯಾಡಿನ ತುದಿಯಲ್ಲಿ'

'ಎಷ್ಟು ದಿನಗಳಿಂದ'

'ಮೂರು ನಾಲ್ಕು ತಿಂಗಳಿಂದ'



'ಈಗ ಅವನು ಹೋಗಿಬಿಟ್ಟ'

'ಯಾಕೆ ಏನಾಗಿತ್ತು ಅವನಿಗೆ'

'ಏನೂ ಇಲ್ಲ. ವಯಸ್ಸಾಗುತ್ತ ಬಂತು. ಕಾಲೇಜಿಗೆ ಹೋಗುವ ವಯಸ್ಸು. ಅದಕ್ಕಾಗಿ ಅವನಿಗೆ ಒಂದು ಹ್ಯಾಟ್ ಹಾಕಲೆತ್ನಿಸಿದೆ. ಸ್ವಲ್ಪ ಆಭಾಸವಾಯಿತು.



'ಹೋಗಲಿ ಇವನ ಜತೆಗೆ ಒಂದು ಸಹಪಾಠಿಯನ್ನು ಕೊಡೋಣ. ಒಬ್ಬನೇ ಒದ್ದಾಡುತ್ತಿದ್ದಾನಲ್ಲ ಎಂದು ಒಂದು ಬಾಲಿಕಾ-ಸಹಪಾಠಿಯನ್ನು ಬರೆದು ಜತೆಗೂಡಿಸಿದೆ.'



'ಇದೇನೋ. ಕಾಲೇಜು ಹುಡುಗಿ ಎನ್ನುತ್ತಿ. ಮುದಿ ಮುಖ ಮಾಡಿದ್ದೀಯಲ್ಲೊ'

'ಈ ಹುಡುಗಿ ವಯಸ್ಸಾದಮೇಲೆ, ಓದು ಶುರು ಮಾಡಿದವಳು ಕಾಣೋ. ೨೦ ನೇ ವಯಸ್ಸಿನಲ್ಲಿ ವಿಧವೆಯಾದಳು. ಆಮೇಲೆ ಓದುವುದಕ್ಕೆ ಆರಂಭ. ಆದರೆ ಕಿವಿ ಲೋಲಕ್ಕು ನೋಡಿದರೆ ನವೀನ ಬಾಲಿಕೆಯರಂತೆ ಕಾಣಿಸುವುದಿಲ್ಲವೇ?'

'ಅವಳ ಮುಖ ಯಾಕೆ ಎದುರಿಗೆ ಕಾಣಿಸುವಂತೆ ಬರೆಯಲಿಲ್ಲ?'

'ಅದೂ ಬರೆದಿದ್ದೇನೆ ನೋಡು, ಆದರೆ ಎದುರು ಮುಖ ಈ ಮುದಿ ಹುಡುಗಿಗೆ ಅಷ್ಟು ಚೆನ್ನಾಗಿಲ್ಲ. ಕೆಲವು ಸಿನಿಮಾತಾರೆಗಳಂತೆ ಈ ಬಾಲಿಕೆಗೂ ಪಾರ್ಶ್ವ ದೃಶ್ಯವೇ ಚೆನ್ನು—ಇದ್ದಿದ್ದರಲ್ಲಿ—



'ಇದೇನೊ ಇದು. ಹೆಂಗಸೊ ಗಂಡಸೊ'

'ಕಿವಿ ಲೋಲಕ್ಕು ನೋಡೊ ಹಣೇ ಕುಂಕುಮ ನೋಡೊ'

'ಆದರೇನೊ ಉತ್ತರ ಹಿಂದೂಸ್ಥಾನದ ರಾಜರುಗಳುಕೂಡು ಹೀಗೆ ಲೋಲಕ್ಕು ಕುಂಕುಮ ಧರಿಸುತ್ತಾರಲ್ಲೊ'

'ಆದರೆ ಕುತ್ತಿಗೆಗೆ ತಾಳಿ ಇದೆಯಲ್ಲೊ'

'ಅದನ್ನೂ ಈ ರಾಜರುಗಳು ಧರಿಸುತ್ತಾರಲ್ಲೊ'

'ಹೋಗಲಿ ಬಿಡೊ ನಮ್ಮ ಹುಡುಗನಿಗೆ ರಾಜನೇ ಸಹಪಾಠಿ ಎಂದು ಇಟ್ಟುಕೊಳ್ಳೋಣ'

'ಆಮೇಲೆ ಅವನ್ಯಾಕ ಹೋಗಿಬಿಟ್ಟ'

'ನೋಡು, ಈ ಸಹಪಾಠಿ ಬಂದಮೇಲೆ ಅವನಿಗೆ ವಯಸ್ಸು ನಿಜವಾಗಿಯೂ ಬಂದಂತೆ. ಅದಕ್ಕೋಸ್ಕರ ಅವನಿಗೆ ಸಿಗರೇಟು ಬಾಯಿಗೆ ಕೊಡಲು ಹೋದೆ ಆ ಹಾಳು ಸೀಗರೇಟು ಅವನ ಮುಖಾನೇ ಕೆಡಿಸಿಬಿಡ್ತು'



'ಇಲ್ಲವಲ್ಲೋ ಅಷ್ಟೇನೂ ಕೆಟ್ಟಿಲ್ಲ. ಹ್ಯಾಟೇನೋ ಕಿವಿತನಕ ಬಂದಿದೆ ಅಷ್ಟೆ'

'ಇಲ್ಲ ಕಣೋ. ಅದೇನು ಅಷ್ಟು ಕೆಡಲಿಲ್ಲ ಆದರೆ ಓರೆ ಕೋರೆ ಆಗಿದ್ದನ್ನು ಅಳಿಸಿಬಿಡೋಣ ಎಂದು ಒಂದು ರಬ್ಬರು ತೆಗೆದುಕೊಂಡು ಉಜ್ಜಿ ಬಿಟ್ಟೆ. ನಾಶವಾಗಿ ಹೋಗಿ ಬಿಟ್ಟ.

'ಅಯ್ಯೋ ಪಾಪ. ಮುಖವೇ ಇಲ್ಲದವನಾಗಿ ಹೋದ ಹಾಗೆಯೇ ಸರಿ'

'ಹೋಗಲಿ ಬಿಡು. ಈ ಬ್ಲಾಟಿಂಗ್ ಪೇಪರ್ ತೆಗೆದು ಹರಿದು ಹಾಕಿಬಿಟ್ಟು ಹೊಸ ಪೇಪರು ಹಾಕಿ ಬೇರೆ ಹುಡುಗನ್ನ—ಈಗಿನ ಕಾಲದವನನ್ನ ಬರೆಯುತ್ತೇನೆ.'

ವಚನಗಳು

೧

ರಸಾಯನ ಶಾಸ್ತ್ರವನೋದಿದರೆ ನಾಲಿಗೆ ಸವೆದಂತಲ್ಲದೆ, ರಸಾಯನ ಮಾಡಲು ಬರದು! ಸಸ್ಯಶಾಸ್ತ್ರವನೋದಿದರೆ ಕಣ್ಣು ಕುರುಡಾದಂತಲ್ಲದೆ ಸೊಸಿಯ ಬೆಳೆಸಲು ಬರದು! ಪ್ರಾಣಿಶಾಸ್ತ್ರವನೋದಿದರೆ ತ್ರಾಣಹೋದಂತಲ್ಲದೆ ಅಲ್ಪಪ್ರಾಣ ಮಹಾಪ್ರಾಣ ವ್ಯತ್ಯಾಸವೇ ತಿಳಿಯದು! ಭೂಶಾಸ್ತ್ರವನೋದಿದರೆ ಧೂಳ ಕುಡಿದಂತಲ್ಲದೆ ಭೂಕೈಲಾಸವ ಮಾಡಲು ಬರದು! ಅಕಟಕಟ! ಗಟ್ಟಿ ಭತ್ತವ ಕುಟ್ಟಿ ಟೊಳ್ಳು ಹೊಟ್ಟನು ಕೊಂಬರಯ್ಯಾ. ಕೊರವಂಜಿಯ ಕಾಯುವಪರಂಜಿ ದೇವಾ!

೨

ಅಡಿಗೆಯ ರುಚಿಗೆ ಊಟದ ಕೋಣೆಯಲ್ಲಿ ಅಡಿಗಡಿಗಾಗುವ ಆರ್ಭಟವೇ ಸಾಕ್ಷಿ! ಸಂಗೀತದ ರುಚಿಗೆ ಕೇಳಿಗರ ಬೆವರೇ ಸಾಕ್ಷಿ! ಉಪನ್ಯಾಸದ ರುಚಿಗೆ ಕುಂತ ಮಂದಿ ಕರಗಿದುದೇ ಸಾಕ್ಷಿ! ಬಾಣಸಿಗನ ಬೆಡಗಿಂಗೆ, ಗಾಯಕನ ಬಿನ್ನಾಣಕ್ಕೆ, ಕಾರ್ಯದರ್ಶಿಯ ವಂದನೆಗೆ, ಕಿವಿತೆರೆದು ಮನಸೋತು ನಂಬುವವ ತಿಳಿಗೇಡಿ ಎಂದನು ನಮ್ಮ ಕೊರವಂಜಿಯ ಕಾಯುವಪರಂಜಿದೇವ!

೩

ಎಂಥ ಕೋಮಲಕಾಯ ನಮ್ಮ ಕಾಲೇಜ ಕುವರರಿಗೆ! ಅಕಟಕಟ, ಅವರಿಗೆ ಸ್ನಾನವೇ ತ್ರಾಸಕಾಣಿರೋ! ಪಾಠವೇ ಗಾಣಕಾಣಿರೋ! ಭೋಜನವೇ ಪರಮ

ಸುಷ್ತು ಕಾಣಿರೋ ! ಪರೀಕ್ಷೆಯೇ ವಿಷಪಾನ ಕಾಣಿರೋ ! ರಜತ ಪರದೆಯೇ ರಾರಾಜಿಸುವ ರಜತ ಪರ್ವತ ಕೇಳಿರೋ ! ಕರ್ಣಾಟ ಸಂಗೀತ ಕರ್ಣಕಠೋರ ಕೇಳಿರೋ ! ಹಿಂದಿ ಹಾಡೆಂದರೆ ಕಿವಿನೀಡಿ ತನುಚಾಚಿ ಮನಮಾರಿ ಕೇಳುವರು ! ಅಕಟಕಟ ! ಇಂತಾಯ್ತು, ಎಂಬನು ಕೊರವಂಜಿಯ ಕಾಯುವಪರಂಜಿದೇವ !

೪

ಮನೆಯು ಗಂಡನ ಮೂಢ ಮನೆವಾರ್ತೆಯನೇನ ಹೇಳುವೆನಯ್ಯಾ ! ಸಾಲೋಗರುಂಡುಂಡು ಸಂದಿಗೊಂದಲಿ ನಡಿಗೆ ! ಮೂಲೋಕ ಗೆದ್ದಂತೆ ಪಾರ್ಕಿನಲಿ ನಡಿಗೆ ! ಕತ್ತಲಲಿ ಕುಳಿಕುಳಿತು ಹೆಂಗಳ ನೆರಳಿಗೆ ಮರುಳಾಗಿ ನೆಮ್ಮದಿ ಕೆಟ್ಟು, ಕೊರಳ ಮಾರ್ದನಿಗೆ ಮಾನವತೆತ್ತು, ಪೆದ್ದುವಂತಿಕೆಯಲದ್ದಿದ ಮುದ್ದುಗಂಡರಿರ ! ಟೊಳ್ಳು ಜೀವನ ಕಾಣಿರೋ ! ಇದಕೆ ಎಳ್ಳು ನೀರು ಬಿಡಿರೋ ! ಬೇಡುವನು ನಮ್ಮ ಕೊರವಂಜಿಯ ಕಾಯುವಪರಂಜಿದೇವ !

೫

ಆಸ್ತಿ ಮಾರ್ವಾಡ ಮಾವನ ಪಾಲು ! ಪಾಸ್ತಿ ಪೆಷಾವರದ ಪಠಾನ ಪಾಲು ! ಅಂಗಿಯಲಿ ಗುಂಡಿ ನಾಸ್ತಿ ! ಭಂಗಿಯಲಿ ಭಾವನಾಸ್ತಿ ! ಅರಿವೆಯಿದ್ದಷ್ಟೇ ಅಂಗಿ ಹೊಲಿಸುಕೊ ಎಂದರೆ, ಹಾಸಿಗೆಯಿದ್ದಷ್ಟೇ ಕಾಲು ಚಾಚೆಂದರೆ ಕಿವಿಗೊಡದೆ, ನನ್ನ ವ್ಯಯಗಲ ಹೆಚ್ಚು, ನನ್ನ ಕಾಲನು ಮುಡಿಸಲೊಲ್ಲೆ, ಎಂದು ಲಲ್ಲೆ ಹೊಡೆದು ಸಾಲ ಮಾಡಿ ಕಂತುಕಟ್ಟಿ, ಕಡೆಗೂ ಬಂತು ವಾರಂಟೆಂದರೆ—ಯಾರೇನ ಮಾಡುವರು ಅಂಥವನ ಕೈ ಹಿಡಿಯುವನು ನಮ್ಮ ಕೊರವಂಜಿಯ ಕಾಯುವಪರಂಜಿದೇವ.

೬

ನೇಸರುದಯವೇ ತಾವರೆಗೆ ಜೀವಾಳ ! ಮಾವನ ಮನಿಆರ್ಡರೇ ಅಳಿಯನ ಜೀವಾಳ ! ಜಾಹಿರಾತುಗಳೇ ಪತ್ರಿಕೆಗಳ ಜೀವಾಳ ! ಕಾಡುಹರಟೆಯೇ ಉಂಡಾಡಿ ಭಟ್ಟರ ಜೀವಾಳ ! ಕೂಪರ ಠಾವಿನಲಿ ಕಡಲೆಯೇ ಜೀವಾಳ, ನಿಂಪರ ಗುಂಪಿನಲಿ ಪರನಿಂದೆಯೇ ಜೀವಾಳವಯ್ಯ ! ಕೊರವಂಜಿಯ ಕಾಯುವಪರಂಜಿದೇವನೇ ನನ್ನ ಜೀವಾಳವಯ್ಯ !

—ನಾ. ಕ.

ಆತನ ಹುಚ್ಚು

●

ಅರಸೀಕೆರೆ ಗಾಡಿ. ಒಂಭತ್ತು ಗಂಟೆ ಸಮಯ. ಬಾಂದಳದಲ್ಲಿ ಚಂದ್ರಮಂಡಲವು ಕಾಣಿಸಿಕೊಂಡು ಇರ್ಕೆಲದ ಜಗತ್ತೆಲ್ಲವನ್ನೂ ತಂಪುಮಾಡಿತ್ತು. ಗಾಡಿ ತುಂಬ ಜನರು. ಆಗಲೇ ಆಕಳಿಕೆ ಪ್ರಾರಂಭ! ನನ್ನ ಬೆಂಚಿನಮೇಲೆ ಆರು ಜನ, ಎದುರು ಬೆಂಚಿನಮೇಲೆ ಎಂಟು ಜನ. ಇನ್ನೆಲ್ಲಿಯ ನಿದ್ದೆ? ಬೆಳಗಾಗುವವರೆಗೂ ಹೀಗೆ ತಪಸ್ಸುಮಾಡುತ್ತಾ ಕುಳಿತರೆ, ಗತಿ ಏನು? ಎಂದು ಮುಂತಾಗಿ ನಾನು ಯೋಚನಾತರಂಗಗಳಲ್ಲಿ ತೇಲುತ್ತಿದ್ದಾಗ—

ಎದುರು ಬೆಂಚಿನಲ್ಲಿದ್ದವರೊಬ್ಬರು "ಸಾರ್! ನನ್ನ ಗಡಿಯಾರ ನಿಂತುಬಿಟ್ಟಿದೆ; ಬೆಂಕಿ ಪೊಟ್ಟಣ ಕೊಡಿ" ಎಂದರು. ನನಗೆ ಆಶ್ಚರ್ಯವಾಯಿತು. ಗಡಿಯಾರಕ್ಕೆ ಕೀಲುಕೊಡದೆ ಶಾಖ ಕೊಡುತ್ತಾನೋ ಏನೋ, ಎಂದು ಶಂಕಿಸಿದೆ. ಬೆಂಕಿಪೊಟ್ಟಣವನ್ನು ಕೊಟ್ಟೆ. ಆತ ಒಂದು ಕಡ್ಡಿಯನ್ನು ಗೀಚಿ ಅದು ಉರಿಯುತ್ತಿರುವಾಗಲೇ ಮೂರು ಬಾರಿ ತನ್ನ ತಲೆಯಮೇಲೆ ಸುತ್ತಾಗಿ ತಿರುಗಿಸಿ ಕಿಟಕಿಯಿಂದಾಚೆಗೆಸೆದ. "ಹುಣ್ಣಿಮೆ ದಿನ ಹೀಗೆ ಮಾಡಿದರೆ ಹಾವಿಗೆ ಹೆಡೆ ಎತ್ತುವುದಕ್ಕಾಗುವುದಿಲ್ಲ" ಅಂದ. ಇದಕ್ಕೇನು ಹೇಳಬೇಕು ಅಂತ ತಿಳಿಯದೆ ನಾನು, "ಹೌದು! ಅದೊಂದು ತರಹ ಶಾಪ!" ಎಂದೆ. "ಶಾಪಾದಪಿ ಶರಾದಪಿ" ಶಾಪಾದಪಿ ಶರಾದಪಿ....ಶಾರಾದಪಿ ಶರಾಪಪಿ...." ಎಂದು ಅದನ್ನೇ ಅದಲು ಬದಲುಮಾಡಿ ಹತ್ತಾರುಸಲ ಒದರಿದ. ಒದರುತ್ತಲೇ ಜೋಬಿಂದ ಗಡಿಯಾರವನ್ನು ಹೊರಕ್ಕೆಳೆದು ಮೂಸಿ ನೋಡಿದ. ಮತ್ತೆ ಅದನ್ನ ಜೇಬಿನಲ್ಲಿರಿಸಿ ಒಂದು ಕರವಸ್ತ್ರವನ್ನು ಹೊರತೆಗೆದ. ಠಕ್ಕರು ಎಂಬ ಕಳ್ಳರ ತಂಡಗಳು ಹಿಂದೆ ದಾರಿಹೋಕರ ಕತ್ತಿಗೆ ಕರವಸ್ತ್ರ ಬಿಗಿದು ಅವರನ್ನು ಕೊಲ್ಲುತ್ತಿದ್ದರೆಂದು ನಾನು ಎಲ್ಲೋ ಓದಿದ್ದೆ. ಅದ್ದರಿಂದ ನನಗೆ ಕೊಂಚ ಹೆದರಿಕೆಯೇ ಆಯಿತು. ಇಷ್ಟರೊಳಗೆ ಆತನ ಬೆಂಚಿನ ಜನಸಂಖ್ಯೆ ಮೂರಕ್ಕಿಳಿದಿತ್ತು. ನನ್ನ ಬೆಂಚಿನವರೂ ಕೂಡ ಒಬ್ಬಿಬ್ಬರು ಗಾಡಿಯ ಬೇರೊಂದು ಮೂಲೆಗೆ ಹೋಗಿ ಬಟ್ಟಲುಗಣ್ಣುಗಳಿಂದ ನನ್ನನ್ನೇ ನೋಡುತ್ತಿದ್ದರು. ನಾನೂ ಕ್ಷಿಪ್ರದಲ್ಲೇ ಅಲ್ಲಿಂದ—ಆತನ ಎದುರಿನಿಂದ—ಪಲಾಯನ ಮಾಡುತ್ತೇನೆ ಎಂದು ಅವರು ನಿರೀಕ್ಷಿಸುತ್ತಿದ್ದರು ಆದರೂ ನಾನು ಕದಲಲಿಲ್ಲ; ಕುತೂಹಲಾವಿಷ್ಟನಾಗಿ ಕುಳಿತು ಆತನ ಕರವಸ್ತ್ರವನ್ನೇ ನೋಡುತ್ತಿದ್ದೆ. ಅವರಲ್ಲೊಂದು ಗಂಟುಹಾಕಿದ. ಅದನ್ನು ಬಿಗಿಮಾ

ಮುತ್ತಿರುವಾಗಲೇ ತನ್ನ ಕತ್ತನ್ನು ಯಾರೋ ಬಿಗಿದಹಾಗೆ ಭಾವಿಸಿ, ಅಯ್ಯೋ! ಎಂದು ಮರುಗಿದ. ಆಮೇಲೆ ಅವನ್ನು ಬಿಚ್ಚಿ ಮತ್ತೆ ತನ್ನ ಕತ್ತಿನ ನೋವನ್ನೂ ತೊಲಗಿಸಿಕೊಂಡ. ಹಿರಿದಾಗಿ ಹಲ್ಲುಕಿರಿದು ಆ ವಿಕಾರ ಮುಸುಡಿಯನ್ನು ಎಲ್ಲರಿಗೂ ತೋರಿಸಿದ. ಆಗ ಅವನ ಬೆಂಚು ಸಂಪೂರ್ಣ ಖಾಲಿಯಾಯಿತು! ಅಂದರೆ, ಉಳಿದವರೆಲ್ಲಾ ಪರಾರಿ!

ಎರಡು ನಿಮಿಷಗಳಾದನಂತರ, ಜೋಬಿಂದ ಒಂದು ಸಣ್ಣ ಚಾಕುವನ್ನು ಹೊರಕ್ಕೆ ತೆಗೆದು ಅದರ ಹರಿತವನ್ನರಿಯಲು ಪ್ರಯತ್ನಿಸುವವನಂತೆ ತನ್ನ ಕೋಟಿನ ಕೆಳಭಾಗದ ಒಂದು ಗುಂಡಿಯನ್ನು ಕತ್ತರಿಸಲು ಯತ್ನಿಸಿದ.

ಚಾಕುವನ್ನು ಕಂಡಕೂಡಲೇ ನನ್ನ ಸಹಬೆಂಚರೂ ಕೂಡ ದೂರ ಸರಿದರು. ಅವರ ಗಾಬರಿಯನ್ನು ಕಂಡು ಆತ ಗಹಗಹಿಸಿ ನಕ್ಕ....

ನಗುತ್ತ, ನಗುತ್ತ ಹಾಸಿಗೆ ಹಾಸಿ ಮಲಗಿಕೊಂಡ. ನಾನೂ ನನ್ನ ಬೆಂಚಿನ ಮೇಲೆ ಹಾಸಿಗೆಹಾಸಿ ಸುಖವಾಗಿ ಪವಡಿಸಿದೆ

ಅಂತು, ಆ ದಿನವೂ ಕೂಡ ನಮ್ಮಿಬ್ಬರ ಉಪಾಯ ಫಲಿಸಿತು. ಮಲಗುವುದಕ್ಕೆ ಜಾಗಸಿಕ್ಕಿತು.

ಸಂಶಯಾತ್ಮಾ

ಮಧ್ಯವಯಸ್ಕರಾದ ಒಬ್ಬರು ಉನ್ನತಾಧಿಕಾರಿಗಳು ಕಿಟಕಿ ಹತ್ತಿರ ಕಳವಳಗೊಂಡು ನಿಂತಿದ್ದರು. ರಾಜಕೀಯ ಜೀವನದಲ್ಲೂ ಅಧಿಕಾರ ಜೀವನದಲ್ಲೂ ಅನೇಕ ಸಮಸ್ಯೆಗಳನ್ನು ಸರಸರನೆ ಪರಿಹರಿಸುತ್ತಿದ್ದ ಅವರಿಗೆ ಈಗ ಒದಗಿದ್ದ ಧರ್ಮಸಂಕಟ ಯಾವುದು? ಅವರು ಮೆಲ್ಲಗೆ ತಮ್ಮೊಳಗೆ ತಾವೇ ಮಾತಾಡ ತೊಡಗಿದರು: "ನಿನ್ನ ವಿಷಯದಲ್ಲಿ ಏನುಮಾಡಬೇಕೆಂದು ನನಗೆ ತೋಚುವುದಿಲ್ಲ! ಹೊರಕ್ಕೆ ಕಳುಹಿಸಿದರೆ ಇತರರಿಗೆ ಅಪಾಯ. ನಿನ್ನನ್ನ ಸರಿಪಡಿಸಿ ಮತ್ತೆ ನಿನ್ನಿಂದ ಉಪಕಾರವಾಗುವಂತೆ ಮಾಡುವ ಸಂಸ್ಥೆಗಳಿವೆಯಂತೆ. ಆದರೆ, ಅವು ಎಲ್ಲೋ, ಅದಕೆಷ್ಟು ಖರ್ಚೋ, ಬಲ್ಲವರಾರು? ನನ್ನಲ್ಲೇ ಇಟ್ಟುಕೊಂಡಿರೋಣ ಅಂದರೆ ಆಪ್ಪಿ ತಪ್ಪಿ ಎಲ್ಲಾದರೂ ನೀನು ಕೈಗೆ ಸಿಕ್ಕರೆ ಮುಖ ಮೂತಿ ಎಲ್ಲಾ ತರಿದುಹೋಗುತ್ತೆ. ಮೊಂಡಾದರೂ ನಿನ್ನಿಂದ ಅನಾಹುತವೇ ಸರಿ!..........ಇರಲಿ! ನಾಳೆ ಏನಾದರೂ ಒಂದು ದಾರಿ ಹುಡುಕೋಣ!" ಎಂದು ಹೇಳಿ ಅವರು ಆ ಹಳೇ ಬ್ಲೇಡನ್ನು ಮತ್ತೆ ಪೆಟ್ಟಿಗೆಯಲ್ಲಿಟ್ಟರು.



“ ಜರ್ಮನರ ಮುಂಡೋಟ ”

ನಿಮಿಷ ೫

●

ರೈಲು ಬಂಡಿಯಲ್ಲಿ ತಗಣೆಗಳ ಕಾಟದಿಂದ ರಾತ್ರಿಯನ್ನೆ ಹಗಲಾಗಿಮಾಡಿದ ಆ ತ್ರಿಶಂಕುವರ್ಗದ ಡಬ್ಬಿಯನ್ನು ನೆನೆನೆನೆದು ಮನೆಯನ್ನುಸೇರಿದೆ; ಅಲ್ಲಿಂದ ಮುಂಬಯಿಗೆ ಬಂಡಿ ಬದಲಿಸಬೇಕಾಯಿತು. ಪುನೆ ಮುಂಬಯಿ ನಡುವಣ ಹಾದಿಯಲ್ಲಿ ಬರುವ ಗುಡ್ಡಗಳು, ಕಾಂಡಾಲಾ ಘಟ್ಟಗಳು, ನೆಲ, ಜಲ, ಗಗನಗಳು ನನ್ನಂಥ ರಸಿಕನಿಗೆ ತೀರ ಸಾಮಾನ್ಯ ನೋಟಗಳು. ಟ್ರಂಕು ಪಾಸೆಂಜರುಗಳ ಎಡೆಯಲ್ಲಿ ತಗಣೆಗಿಂತ ಕಿರಿದಾಗಿ ಕುಳಿತಿರಬೇಕಾದ ವ್ಯಕ್ತಿಯು ಈ ಬಂಡಿಯಲ್ಲಿ, ನಿಮಿಷ ನಿಮಿಷವೂ ತಿರುಗಾಡುವ ಚಾ-ವಾಲ, ಚಿವ್ಡಾವಾಲಾ, ಸೋಡಾ-ವಾಲಾ. ಲೆಮನ-ವಾಲಾರುಗಳ ಸಜ್ಜನ ಪಾದರೇಣುವೇ ಸರಿ. ಮುಂಬಯಿ ಸೇರುವ ತನಕ ಕಪ್ಪುಬಸಿ ಹಿಡಿದು ನಿಲ್ಲುವ ಚಾ-ಚಿವ್ಡಾದಲ್ಲಾಲರ ಕಾಲುಗಳನ್ನು ಅವನು ನೋಡ ಬೇಕೇ ಹೊರತು ಕಾಂಡಾಲ ಘಟ್ಟವನ್ನಾಗಲಿ, ಸೀರಾಕಣಿವೆಯನ್ನಾಗಲಿ ಅವನು ನೋಡಲಾರನು.

ನಾನು ಮುಂಬಯಿ ಸೇರಿದೆ. ಟಂಗಾವಾಲರ ತೆರಿಗೆಗೆ ಸಿಲುಕದೆ ಗೆಳೆಯರ ಮನೆಯನ್ನು ಸೇರಿದೆ. ಈ ಬಾರಿ ಮುಂಬಯಿಯು ಜನ, ವಾಹನ ವಿರಹಿತವಾಗಿ ನನ್ನಂಥ ಕಾಲುನಡೆಯುವನಿಗೆ ತುಂಬಾ ಮರ್ಯಾದೆಯಿತ್ತುದು ಸಂತೋಷದ ಸಂಗತಿ. ನಾನು ಮುಂಬಯಿಯಲ್ಲಿ ನಡೆದ ಮೂರುದಿನದಲ್ಲಾದ ಮುಖ್ಯವೊಂದು ಸಂಗತಿಯನ್ನಿಷ್ಟೆ ಹೇಳುತ್ತೇನೆ.

ಮುಂಬಯಿಗಿ ಹೋದಾಗಲೆಲ್ಲ ನನಗೂ ಚೌಪಾಟಿಯ ಮರಳು ದಿನ್ನೆಗೂ ಇಷ್ಟ. ಹಾಗಾಗಿ ಹೋದ ದಿನವೂ ಅಲ್ಲಿಗೇನೆಹೋದೆ. ಆದರೆ ನನ್ನ ಸುದುರ್ದೈವಕ್ಕಾಗಿ ಅಲ್ಲಿ ಆದಿನ ಸಾವರ್ಕರರ

"ಹಿಂದು ಓಂ ಕಾ ಹಿಂದುಸ್ಥಾನ್.
ಕಭೀ ನಹೋಗಾ ಪಾಕಿಸ್ಥಾನ್."

ಗಾಯನ ವಿತರಣೆಗಾಗಿ ಲೌಡ್‌ಸ್ಪೀಕರುಗಳನ್ನು ಹೂಡಿದ್ದರು, ನಾನು ಅದಕ್ಕಾಗಿ ಹೋಗಿ,ಮುಂಬಯಿಯ ಹಿಂದೂ-ಮುಸ್ಲಿಂಮರ್ ಲಾಠಿ,ಬರ್ಜೀಭೋಜನದ ರಸದೂಟ ಸವಿಯಲು ಅಂಜಿದೆ. ಹಾಗೆಂದು ತುಸುಕತ್ತಲು ಇಳಿದಮೇಲೆ ಇನ್ನೊಮ್ಮೆ ಚೌಪಾಟಿಗೆ ಹೋದೆ. ಚೌಪಾಟಿಯಾಗ ಬ್ಲಾಕ್-ಔಟಿನ ಸುಖಸವಿಯುತ್ತಿತ್ತು, ಚೌಪಾಟಿಗೆ ನಿಜವೈಧವ್ಯವು ಬಂದಂತೆಯೇ ನನಗೆ ಕಂಡಿತು. ಬೇಲ್‌ವಾಲನೂ ಇಲ್ಲ, ನಾರಿಯಲ್ ವಾಲನೂ ಇಲ್ಲ. ಜನ ಸಮುದ್ರದ ಮುಂದೆ ಕಣ್ಮುಚ್ಚಿ ರೋಮಾಂಚಕರಾಗಬಲ್ಲ ನವಯುವ ಯುವತಿಯರೂ ಇಲ್ಲ, ಬದಲೋ ಆಕತ್ತಲಲ್ಲಿ, ತಮ್ಮ ಹೆಂಡಿರನ್ನು ಊರಿಗೆ

ಕಳುಹಿಸಿ, ತಮ್ಮ ಕತ್ತಿನಮೇಲೆ ತಾವೇ ಕೈಯಿರಿಸಿಕೊಂಡು ಕುಳಿತ ನಾಲ್ಕೆಂಟು ಪೆನ್‌ಶನ್‌ಪ್ರಭೃತಿಗಳು "ಯಾವ ವಿಧದಿಂದಲಾದರೂ ಸಾವು ಬಂದರೆ ಸಾಕೆಂದು ಕುಳಿತಿದ್ದರು." ನಾನೂ ಕೈಗೆ ನನ್ನ ಹಣೆಯನ್ನು ತಾಗಿಸಿಕೊಂಡು ಕುಳಿತೆ. ಚೌಪಾಟಿ ದಂಡೆಯಲ್ಲಿ ಸಾಗರಮುಖಿಗಳಾಗಿ ನಿಂತ ಮಹಲುಗಳೊಂದಕ್ಕೂ ಬೆಳಕಿಲ್ಲ. ಅಲ್ಲಲ್ಲಿ ಸಂದಿಗಳಿಂದ ಇಣಿಕಿನೋಡಿದ ಕಿರಿದೀವಿಗೆಗಳು ಹತ್ತುಗಂಟೆಗೆ ಸಮನಾಗಿ ಹಾರಿ ಹೋದುವು. ಅಯ್ಯೋ ಈ ಅಮಾವಾಸ್ಯೆಕಾಣಲು ಮುಂಬಯಿಗೆ ಬರಬೇಕೇ ಅನ್ನಿಸಿತು. ಮೇಲೆ ನೋಡಿದೆ ನಾಲ್ಕಾರು ನಕ್ಷತ್ರಗಳು ಕಾಣಿಸಿದವು. ಮುಂಬಯಿ ನಗರಪ್ಪಗಳು (City Fathers) ಇವಕ್ಕೇಕೆ ಕರಿಮುಚ್ಚಳಹಾಕಲಿಲ್ಲ; ಮಿಲಿಟರಿ ಅಧಿಕಾರಿಗಳಿಂದ ದಂಡಹಾಕಿಸಿಕೊಳ್ಳುತ್ತಾರಲ್ಲ—ಅನಿಸಿತು.

ಸಾಕಾಯಿತು, ಹತ್ತು ಘಂಟೆ ಕಳೆಯಿತು. ಮನೆಗೆದ್ದು ಹೊರಟೆ ಸಾಧಿಸಿತೊಂದು ರಸನಿಮಿಷ, ಒಮ್ಮೆಗೇ "ಟೀಂ" ಎಂಬನಿನಾದವೆಸಗಿತು. ಮುಂಬಾಪುರಿಯೇ ಅದುರಿದಂತಾಯಿತು, ಆಕಾಶವೇ ಪುಡಿಪುಡಿಯಾಗಿ ಚೌಪಾಟಿಯಮೇಲೆ ಉದುರಿದಂತಾಯ್ತು. ಮಲಬಾರ ಹಿಲ್‌ತುದಿಯಿಂದ ೧೬ 'ಥೀಟಿನ' ಫಿರಂಗಿಗಳನ್ನು ಉಢಾಯಿಸಿದಂತಾಯಿತು, ಆಗ ಸಂಭವಿಸಿದ ಕೇಂ-ಶೃತಿಯು ಆ 'ಬ್ಲಿಟ್ಸ್' ನಿಂದ ಬುದ್ಧಿಯ "ಡಂಕರ್ಕೆ" ಪ್ರಾಪ್ತಿಸಿತು. ಅರಿತಾಸಿನ ವ್ಯವಸ್ಥಿತವಾದ ಹತ್ತುಹೆಜ್ಜೆ ರಿಟ್ರೀಟಿನಿಂದ ಪೂರ್ವರಚಿತ ರಸ್ತೆಯ ಪೇವ್‌ಮೆಂಟ್ ಮುಗ್ಗಲಿಗೆ ಸರಿದೆನು, ಆಗ ತಿಳಿಯಿತು ಅದು ವೈರಿದಾಳಿಯಲ್ಲವೆಂದೂ, ನನ್ನನ್ನು ಹಠಾತ್ತನೆ ತಡೆದು ಈ ಅತ್ಯಾನಂದಕ್ಕೆ ಕಾರಣವಾದುದು ಬೆಳಕು ಆರಿದ ಕಾರ್ಪರೇಶನ್ ದ್ವೀಪಸ್ತಂಭವೆಂದು.

ನಾನು ಸೋತವನೇಇರಲಿ. ಗೆದ್ದವನೇಇರಲಿ. ನನ್ನ ವೈರಿ ಬಲವೆಷ್ಟೆಂಬುದರ ಪರಿಜ್ಞಾನವು ಈ ಯುದ್ಧದವೇಳೆಯಲ್ಲು ನನಗೆ ಉಂಟಾಯಿತು.

ಮರುದಿನ ಕನ್ನಡಿಹಿಡಿದು ಹಣೆನೋಡುತ್ತೇನೆ-ಸಮನಾಗಿ ಹಣೆಯಮೇಲೆ V ಆಕಾರದಲ್ಲಿ ಬಾತಿದ ಬಾಸುಂಡೆಬೇರೆ.

ನಿಮಿಷ ೬

ಮುಂಬಯಿಯಿಂದ ನಾನು ಮರಳಿ ಬಂದುದು ರಸವರ್ಷ; ನಿಮಿಷವಲ್ಲ. ಅಲ್ಲಿಂದ ಪುಣೆ ಸೇರುವತನಕ ಬೆವರಿನ ರಸವರ್ಷ! ನಮ್ಮ ವಿಧಿ-ಉದ್ದ-ರೈಲು ಬಲು ಅವಸರದಿಂದ ಮುಂಬಯಿಯನ್ನೇನೊ ಬಿಟ್ಟಿತು. ಆವರೆ ಓಟದ ಹುಮ್ಮಸ ಕಾಲೇಜು ವಿದ್ಯಾರ್ಥಿಗಳ ಸೋಶಲಿಸಮ್ಮಿನ ಭರದಂತೆ ಕ್ರಮೇಣ ಕಡಮೆಯಾಗಿ, ಪುಣೆಯನ್ನು ಸೇರುವಾಗ, ೯-೫ ಆಗಿತ್ತು. ಅಕ್ಕೆ ಹೊರಡುವ ಬೆಂಗಳೂರಿನ ಬಂಡಿ 'ಕೇಕೇ' ಹಾಕುತ್ತಿತ್ತು. ಆ ಮೂರು ದಿನಗಳಿಂದ ಓಡೋಕಿಯೋವಿಗೆ ಬಾಂಬು ಬಿತ್ತೆಂಬ ಸುದ್ದಿಕೇಳಿ ಗಿರ್ಗಾಂ, ದಾದರ, ಮಾತಂಗ ನಸ್ಸ್ಯರೆಲ್ಲ ಮುಂದಿನವಾರದ ಬಂಡಿಯಾದರೂ ಸಿಕ್ಕೀತು ಎಂಬ ಭರವಸೆಯಿಂದ ಪುಣೆಯಲ್ಲಿ ಕಾದಿದ್ದರು. ಬಂಡಿ ಬಂದು ನಿಲ್ಲಲು "ಕೂಲಿ, ಕೂಲಿ" ಎಂದೆ. ಯಾರೂ ಇಲ್ಲ. 'ಹಮಾಲಿ, ಹಮಾಲ'

ಎಂದೆ. ಅಜಾಮಿಳನ ನಾರಾಯಣನಂತೆ 'ಕಾವ್ರ್ರೇಡ್'-ಎಂದೆ. ಯಾರೂ ಬರಲಾರರು. ಬಂಡಿಗೆ ಪ್ಲೇಗು ಬಡಿದಂತೆ ಅವರು ದೂರವೇ ನಿಂತಿದ್ದರು.

ಅವರ ಸತ್ಯಾಗ್ರಹ ಕಂಡು ನನ್ನ ಸಾಮಾನುಗಳನ್ನು ನಾನೇ ಕೆಳಗಿಳಿಸಿದ ನೋಟ ನನ್ನ ಹೆಣವನ್ನು ನಾನು ಹೊತ್ತುದಕ್ಕಿಂತಲೂ ಸೊಗಸಾಗಿತ್ತು. ಬೆಡಿಂಗ್, ಟ್ರಂಕುಗಳನ್ನು ಇಳಿಸಿ ತಿರುಗಿ 'ಹಮಾಲ್' ಎಂದೆ. ಅವನೋ—ದೂರದಿಂದ 'ಯಾಕೆ ಅವಸರ ಮಾಡುತ್ತೀರಿ. ಬಂಡಿ ಫುಲ್ ನಾಳಿನ ಬಂಡಿಯಲ್ಲಿ ವಿರಾಮವಾಗಿ ಕುಳಿತು ಹೋಗಿರಲ್ಲ"-ಎಂದನು. "ಫುಲ್ಲಾಗಲಿ ಬಿಡಲಿ, ಸಾಮಾನು ಸಾಗಿಸಯ್ಯ"-ಎಂದೆ. ಎರಡು ಸಾಮಾನಿಗೆ 'ಬಾರಾ ಆಣಾ' ಎಂದ. ಬೆಂಗಳೂರಿನ ಬಂಡಿ ತಿರುಗಿ ಸಿಳ್ಳು ಕೂಗಿತು.

ಅಂತು ಇಂತು ಸಾಮಾನು ಸಾಗಿಸಿ, ಏಣಿ ಏರಿ, ಏಣಿ ಇಳಿದು ಬೆಂಗಳೂರ ಡಬ್ಬಿಗೆ ಬಂದರೆ—ಅದು ಜನರನ್ನು ಮಾರ್ಕೆಟಿಗೆ ಒಯ್ಯುವ ಕೋಳಿ ಬುಟ್ಟಿಗಳಂತೆ ತುಂಬಿಸಿಕೊಂಡು ಆ ಬಂಡಿ ನಿಂತಿತ್ತು. ಬಂಡಿ ಹೊರಟಾಯಿತು. ಅವಸರದಿಂದ 'ಇಂಟರ್' ಗಾಡಿಯ ಕಿಟಕಿಯಿಂದ ನುಸುಳಿ, ಸಾಮಾನು ದಕ್ಕಿಸಿಕೊಂಡೆ. ಅದಾದರೂ ಕಷ್ಟವೆನಿಸಲಿಲ್ಲ. ಆದರೆ ಮುಂದೆ ಬಾರವ ಕೈಯಿಂದ 'ಬಾರಾ ಆಣೆ' ತೆತ್ತೆ. ಆ ಕೊಸರಿಯ ನಿಮಿಷ ರಸನೋಕ್ಷನಾಗಿತ್ತು !

ನಿಮಿಷ ೭

ರೈಲು ಸಾಗಿತು. ಇಂಟರಿನಲ್ಲೂ ಅಂತರಿಕ್ಷದ 'ಬರ್ತ'ನ್ನು ಪಡೆದು ಮಲಗಿದೆ. ನನಗೆ ಆಯಾಸವಾಗಿತ್ತೋ-, ಅಥವಾ ಇಷ್ಟೆಲ್ಲ ಜನರಲ್ಲಿ ಯಾರನ್ನು ಕಡಿಯಲಿ ಎಂಬ ಸಂದಿಗ್ಧ ಇಲ್ಲಿನ ತಗಣಿಗಳಿಗೆ ಬಂದಿತ್ತೋ-ಅಂತು ಸುಖನಿದ್ದೆ ಪ್ರಾಪ್ತಿಸಿತು. ಬೆಳಗಾದುದೇ ಬೆಳಗಾವಿನಲ್ಲಿ. ಹಿಂದೆ ನನ್ನ ಗೋಳನ್ನು ಅಮರವಾಗಿ ಮಾಡಿದ ಊರನ್ನು ಅಮರಗೋಳ್-ಎಂದು ಕರೆದ ಕನ್ನಡಿಗರು ನನಗೆ ಬೆಳಕಿನ ಕಾವನ್ನು ಕೊಟ್ಟ ಊರನ್ನು "ಬೆಳಗಾವು" ಎಂದು ಕರೆದುದರಲ್ಲಿ ಆಶ್ಚರ್ಯವೇನಿಲ್ಲ. "ಉದಯವಾಯಿತು ಕೊನೆಗೆ ಚೆಲುವ ಬೆಳುವಲನಾಡು" ಎಂದು ಹುಯಿಲುಗೋಳು ಗೀತದ ಗೋಳು ಹುಯಿಲನ್ನು ಹಾಡಿ ಕುಳಿತೆ. ರೈಲ್ವೆ ನಿಲ್ದಾಣದ ಚಹಾವಾಲನು ನನ್ನ ಬಳಿಗೆ ಬಂದು 'ಕಾಯಿ ಪಾಯಿಜೆ' ಮಾಡಿದನು. ಬಂಡಿಯನ್ನು ಬಂದೇರಿ ಸಹವರ್ತಿತರಾದ ಒಬ್ಬಿಬ್ಬರು ಕನ್ನಡದ ಅಣ್ಣಗಳಾಗಿ ಕಾಣಿಸಿದರು. 'ಕುಠೆ ಜಾಲಾ' ಎಂದರು. ಹೀಗಾಗಿ ಬೆಳಗಾವಿಗೆ ಬೇರೆ ಅರ್ಥ ಹುಡುಕಬೇಕಾಯಿತು. ಕನ್ನಡಕ್ಕೆ ಇದು 'ಬೋಳುಕಾಪಿ' ಕೊಡುವ ಊರಿರಬೇಕು ಅನಿಸಿತು.

ಹಾಗೂ ಹೀಗೂ ಯುದ್ಧ ತಪ್ಪಿಸಿಕೊಂಡು ಬರುವವರ ಜತೆಗೆ ನಾನು ಬಂದೆ. ಆದರೆ ಬಂದಿಳಿದ ಪ್ಲೇಟಫಾರಮ್ಮಿನಲ್ಲಿ ತಿರುಗಿ ಯುದ್ಧ ಮುಂದಾದಂತಾಯಿತು.

" ಘಾರ್‌ವಾರ್ ''—ಕಾಣಿಸಿತು. ನನ್ನ ಭೀತ ಮುಖವನ್ನು ಕಂಡ ಒಬ್ಬರು ಇದು ಆ-ವಾರ್ ಅಲ್ಲ, ಇದು 'ದಾರ'ವಾಡುವ ಕಾಂಗ್ರೆಸ್ಸಿನ ಜನರ 'ವಾರ್'-ಯಾನೆ ಯುದ್ಧಭೂಮಿಯೆಂದರು. ಅಹಿಂಸಾತ್ಮಕಜನರ ಯುದ್ಧಕ್ಕೆ ಅಂಜದೆ ಊರಿಗೆ ಬಂದೆ

ಕೊನೆಗೆ ಊರಿಗೆ ಬಂದಮೇಲೆ ತಿಳಿಯಿತು. 'ದಾರ'-ಎಂದರೇನೂ ಅಲ್ಲ. ಅಲ್ಲಿ ಕುಡಿಯುವ ನೀರಿಗಾಗಿ ಜನರು ವಾರ್ ನಡೆಸಿದ್ದರು.'ದಾರಾ' ಹೋಗಿ "ಧಾರಾ" ಯಾನೆ ಮಳೆ ಧಾರೆಯಾಗಬೇಕೆಂದು ತರ್ಕಿಸಿದೆ. ಹಾಗಿದ್ದರೆ ಈ ಊರನ್ನು ಬಿಡುವ ತನಕ ನೀರು ಕುಡಿಯದೆ ಬರಿಯ 'ಚಹಾ' ದಿಂದಲೇ ತೃಪ್ತನಾಗಲು ನಿರ್ಣಯಿಸಿದೆ.

ನೀರಿಲ್ಲದ ಊರಾದರೂ ನಾನಿಳಿದ ಮನೆಯವರು ಸ್ನಾನಕ್ಕಾಗಿ ನನ್ನನ್ನು ಒತ್ತಾಯಿಸಿದರು. " ಚಲೋ ಬಾಂವಿ ನೀರು ಬಂದವೆ " ಎಂದರು. ಸಂಭ್ರಮಕ್ಕೆ ಗೊದ್ರೇಜ—ನಂ. ೧ ಸಾಬಾಣಕೊಟ್ಟರು. ಅದರಮೇಲೆ ಕೀಲಿ ಚಾಪು ಒಡೆದಿತ್ತು. ಸಾಬೂನಿಗೆ 'ಕೀಲಿ' ಚಾಪು ಯಾಕೆ ಎಂದು ಯೋಚಿಸುತ್ತ 'ಜಳಕಿ'ಸತೊಡಗಿದೆನು ನನ್ನತಲೆ ಚಾವಣಿ (Crop) ಯು ೧ ನೇ ನಂ. ಗೊದ್ರೇಜದಿಂದ ತಿಕ್ಕಲ್ಪಡಲಾಯಿತು. ನೀರೆರೆದುಕೊಂಡು ತಿರುಗಿ ತಿಕ್ಕಿಕೊಂಡೆ. ಆಗೊಂದು ರಸಮುಹೂರ್ತ ಕಾಣಿಸಿತು। ನಾನು ಎರೆದುಕೊಂಡ ಯಾವತ್ತು ನೀರು, ಸಾಬಾಣಗಳು ನನ್ನ ಜಟಾಮಂದಿರದಲ್ಲೇ ಸ್ಥಾಪನೆಯಾಗಿದ್ದವು. ಅದರಿಂದ ಶಿವರಾಮನಾದ ನಾನು ನನ್ನ ರಾಮನ ಪಾಲಿಗೆ 'ಶವ'ನಾಗಿ ಶಿವನಪಾಲಿಗೆ ಇಮ್ಮಡಿಯಾದೆ. ಆಗ ಗೋದ್ರೆಜನ 'ಕೀಲಿ' ಚಾಪಿನ ಅರ್ಥ ನನಗೆ ಸ್ಪಷ್ಟವಾಯಿತು. ನನ್ನ ಕ್ರಾಪಿನಲ್ಲಿ ಈ ಕೀಲಿ ಮಾರ್ಕಿನ ಸಾಬಾಣ ಯಾವತ್ತು ನೀರನ್ನು ತುಂಬಿಸಿ ಕೀಲಿಯಿಕ್ಕಿತು—ಎಂದೆ. ಆದರೆ ಮನೆಯವರು ಆ ಕೀರ್ತಿಯನ್ನು ಮುಂಬಯಿ ಗೊದ್ರೇಜ ಕಂಪೆನಿಗೆ ಸಲಿಸಲು ಇಷ್ಟಪಡದೆ। ಧಾರವಾಡದ ಹಾರ್ಡವಾಟರು-' ಗಟ್ಟಿನೀರು ' ಗೊದ್ರೇಜ ಸಬಕಾರವನ್ನು ಹಿಡಿದು ಕೀಲಿ ಒತ್ತಿತ್ತು "—ಎಂದರು.

ಅಂತು ನನ್ನ ಜಟಾಮಂದಿರದಲ್ಲಿ ಸೆರೆಯಾದ ನೀರು ಸಬಕಾರಗಳೆರಡನ್ನು ತೆರೆದು, ಬಾಚಿ ಹೊರಕ್ಕೆ ನೂಕುವಲ್ಲಿ ಜೆಸ್ಸೂರಿನ ಆರು ಹಣಿಗೆಗಳು ಹುಡಿಯಾದುವು.

ನಿಮಿಷ ೮

ಸ್ನಾನದ ನಿಮಿಷ ಕಳೆದ ಮರುಕ್ಷಣ ಇನ್ನೊಂದುರಸನಿಮಿಷ ನನಗಾಗಿ ಕಾದಿತ್ತು. ಜಳಕವಾಗುವುದರಲ್ಲೇ ' ಸಾರಿ ನನ್ನದಾರಿ ಮ್ಯಾಗ, ಊಟದಥಾಟ ಕುಣಿಯುತ್ತಿತ್ತು; ಕುಣಿಯುತ್ತಿತ್ತು ಮಣಿಯುತ್ತಿತ್ತು ಚಪಾತಿ ಪಲ್ಯ ಇಣಕುತ್ತಿತ್ತು' ಊಟತೊಡಗಿತು, ಸಾರುಹರಿಯಿತು. ಸಾರಿರಲು ಚೆನ್ನಾದ್ದು। ನೀರಿಲ್ಲದಿರೆ ಏನು। ನೀರು ಬೇಕೆಂದಿರಲು। ಸೂರಿನೊಳು ಕೂತುಣ್ಣುವರೆ—ಉದರಾಂತರಾತ್ಮ॥ ಎಂದು ಕವನ್ನೆಸೆದು ಭೋಜನಮಾಡತೊಡಗಿದೆ! ಶೀಕರಣೆಸವಿದೆ, ಆನಂದದಿಂದ ತಿಂದು

ತೇಗಿ ನಾದಿಸಿ ಕೈತೊಳೆಯಲುಕೊಟ್ಟ ನೀರಿಂದ 'ಬಾಯಿ'ತೊಳೆದೆ. ಆ ರಸದೂಟವನ್ನು ಮುಗಿಸುವ ರಸನಿಮಿಷ ಪ್ರಾಪ್ತಿಸಿತು.

ಪ್ರಾಯಶಃ ತಾವು ಕೊಟ್ಟಊಟದಿಂದ, ಮಲಬಾರದವರ ನೆರೆಯೂರವನಾದ ನನಗೆ ಅಂತಾಗಬಾರದೆಂದು ಮ್ಯಾಗ್‌ಸಲ್ಫ್ ಸೇರಿಸಿಯೇ ನೀರು ಕೊಟ್ಟಿರಬೇಕು.

ಹೋಟೆಲ್ಲಿಲ್ಲಿ ಆ ಕರುನಾಡವರು ಹೀಗೆಯೇ ಮಾಡಿದರು. 'ಯಾಕಿಂಥ ನೀರು ಕೊಡುತ್ತೀರಿ' ಎಂದರೆ 'ನಳ—ಬಂದ್ ಇತ್ರಿ' ಅನ್ನುತ್ತಾರೆ. "ನಳ ಬಂದ್ ಇದ್ದರೂ ನಳಪಾಕ ಬಂದ್ ಇಲ್ಲ" ಅವರಿಗೆ

ನಿಮಿಷ ೬

ಯಾತ್ರೆ ಮುಗಿಸಿ ಊರನ್ನು ಸೇರಲು ಹೊರಟೆ. ಬಾನಾಸುರ (ವರ?) ದಲ್ಲಿ ರೈಲಿನ ಮೋಟರನ್ನೇರಿಕುಳಿತು ಊರುಸೇರುವ ಮುನ್ನಮಧ್ಯರಾತ್ರಿಸಮೀಪಿಸಿತ್ತು. ನಾನು ಊರಿಗೆ ಬರುವೆನೆಂದ ದಿನಕ್ಕು ಅವಧಿ ೨೪ ತಾಸುಮೀರಿತ್ತು. ಮನೆಯಾಕೆ ತಡವಾಗಿಬಂದ ಪತಿದೇವನಂ ಸತ್ಕರಿಸಿ, ಊಟ ಉಪಚಾರವನೆಸಗಿ, ಎಲ್ಲವೂಂ ಮುಗಿದೇಳುವ ವೇಳಗೆ "ಇಷ್ಟುಬೇಗ ಯಾಕೆ ಬಂದಿರಿ? ಇನ್ನೊಂದು ವಾರ ಕಳೆದು ಬರಬಹುದಿತ್ತು" ಎಂದ ತಾಳ್ಮೆಯಮಾತು ಅಲ್ಫ್ರೆಡ್ ಸಂಗಡದವರ ತಾಳ್ಮೆಯನ್ನು ಮೀರುವಂತಿತ್ತು. ಧಾರವಾಡದ ಘಟ್ಟಿಸೀರಿಗಿಂತಲೂ ರಸಭರಿತವಾಗಿತ್ತು ಆಮಾತು.

ರಸನುಸಿ ಢೌಂಗಿಕ.

—ಕಾರಂತ.



ಯಾಕೋ! ಈ ಷೇರು ಹಣದ ಪತ್ರಾನೇ ಹರಿದು ಹಾಕಿದೀಯಾ?
"ಹೀಗೇನೇ ತೂಕಮಾಡಿ ಮಾರಿದರೆ ಅದಕ್ಕಿಂತ ಎಚ್ಚು ಕಾಸು ಉಟ್ಟುತ್ತದೆ ಬುದ್ಧಿ"

ಬಾಗಿಲು!

"ಬಾಗಿಲು! ಬಾಗಿಲು!" ಅಂತ ಮನೆಮುಂದೆ ನಿಂತುಕೊಂಡು ಕೂಗಿದರೆ, ಆ ಪದಾರ್ಥಕ್ಕೇನಾದರೂ ಕಿವಿ ಇದೆಯೇ, ಬುದ್ಧಿ ಇದೆಯೇ, ಕನಿಕರ ಇದೆಯೇ ತಾನಾಗಿ ತೆರೆದು ಒಳಗೆ ಬಿಡುವುದಕ್ಕೆ? ಒಳಗಿರುವವರ ಹೆಸರು ಕೂಗಬಾರದೆ?

ಆದರೂ ನೋಡಿ. ನೂರಕ್ಕೆ ತೊಂಬತ್ತೈದು ಮಂದಿ ಒಳಗಿರುವವರ ಹೆಸರು ಕೂಗುವುದಿಲ್ಲ. 'ಬಾಗಿಲು'! ಅಂತಾರೆ ಅಷ್ಟೆ! ಹೆಸರು ಗೊತ್ತಿಲ್ಲದೆ ಇಲ್ಲ; ಕೂಗುವುದಕ್ಕೆ ನಾಲಿಗೆ ಇಲ್ಲದೆ ಇಲ್ಲ. ವಿಶಾಲವಾದ ಎದೆ, ಚೂಪಾದ ಗಂಟಲು ದೇವರು ಕೊಟ್ಟಿದ್ದಾನೆ. ಆದರೂ ಸಂಕೋಚ! "ಸರೋಜ!" "ಸರಸೂ" ಅಂತ ತಮ್ಮ ಪ್ರಾಣಕಾಂತೆಯರ ಹೆಸರನ್ನು ಬಹಿರಂಗಪಡಿಸುವುದಕ್ಕೆ ಸಂಕೋಚ. ಮತ್ತೆ ಕೆಲವರಿಗೆ "ತಿಮ್ಮಮ್ಮ", "ಪುಟ್ಟತಾಯಿ" ಎಂಬ ಕೇವಲ ಗ್ರಾಮ್ಯನಾಮದ ಗೃಹಿಣಿಯರಿದ್ದು ಆ ಹೆಸರುಗಳನ್ನು ಕೂಗಲು ನಾಚಿಕೆ. ಮನೆತುಂಬ ಮಕ್ಕಳಿದ್ದವರಿಗೆ, "ಲೋ! ಚಿಕ್ಕವನೇ!" "ಪುಟ್ಟಕೂಸು!" ಎಂದು ಮುಂತಾಗಿ ಕೂಗಿ ತಮ್ಮ ಸುದಾಮುತನವನ್ನು ಹೊರಪಡಿಸಲು ಸಂಕೋಚ. ಅಲ್ಲದೆ ಯಾವುದಾದರೊಂದು ಮಗುವಿನ ಹೆಸರನ್ನು ಕೂಗಿದರೆ, ಕೂಡಲೇ ಮನೆಯೊಳಗೆ, "ನಾನು ತೆಗೆಯುತ್ತೇನೆ", "ನಾನು ತೆಗೆಯುತ್ತೇನೆ" ಎಂಬ ಮಾರಾಮಾರಿ ಪ್ರಾರಂಭವಾಗುತ್ತೋ ಎಂಬ ಭಯ ಕೆಲವರಿಗೆ. "ಏನು? ಎಲ್ಲಾ ಬಿಟ್ಟು, ರಾಮು! ಪುಟ್ಟ! ಶಾರದೆ! ಅಂತ ಕೂಗುತ್ತೀರಿ ಬಾಗಿಲಲ್ಲಿ! ನಿಮ್ಮ ಅಲಿ ದಾಟ ಆಂಜನೇಯನಗುಡಿ ಪೂರೈಸಿ ಬರುವ ತನಕ ಅವು ಕಣ್ಣುಬಿಟ್ಟುಕೊಂಡು ಕೂತಿರುತ್ತವೆಯೇ?" ಎಂಬ ಪ್ರತಿಭಟನೆ ಬೇರೆ, ಕೆಲವರಿಗೆ! ಅಥವಾ, ಮನೆಯಲ್ಲಿ ಅಣ್ಣತಮ್ಮಂದಿರು ಅತ್ತೆಮಾವಂದಿರು ಅನೇಕರಿದ್ದರೆ ಯಾರಾದರೂ ಕೈಬಿಡುವಾಗಿದ್ದವರು ಬಂದು ಒಳಕ್ಕೆ ಬರಮಾಡಲಿ ಎಂಬ ವಿಶಾಲೋದ್ದೇಶದಿಂದ, ನಿಷ್ಪಕ್ಷಪಾತ ದೃಷ್ಟಿಯಿಂದ ತಮ್ಮ ಗೃಹಪ್ರವೇಶಕ್ಕೆ ಪ್ರತಿಬಂಧಕವಾಗಿ ನಿಂತಿರುವ ಬಾಗಿಲ ಹೆಸರನ್ನೇ ಹಿಡಿದು ಕೂಗುವುದು ಕೆಲವರ ವಾಡಿಕೆ. ಅರ್ಧಾಂಗಿ ಮಾತ್ರ ಮನೆಯೊಳಗಿದ್ದರೆ, ಆಕೆಯ ನಾಮಧೇಯವನ್ನು ಪ್ರೇಮೋನ್ಮಾದದಿಂದ ಉಚ್ಚರಿಸಿ ಬೀದಿಯಲ್ಲಿ ಹೋಗುವವರನ್ನು ಅಸೂಯೆ ಪಡಿಸುವುದಕ್ಕಿಂತ ನಿಶ್ಚೇತನವಾದ ಕವಾಟವನ್ನು ನಿರ್ವೀರ್ಯವಾಗಿ ಕೂಗುವುದೇ ಸರಿ ಎಂದು ಕೆಲವರು ಹಾಗೆ ಮಾಡುವರು. ಆದರೆ ಇಂತಹವರು ಬಾಗಿಲು ಎಂದು ಕೂಗುವಾಗ ಆ ಮಾತಿನಲ್ಲಿ ಮಧುರತರ ಪ್ರೇಮವನ್ನು ತುಂಬಬಲ್ಲರು. ಅದನ್ನು ಕೇಳಿದಾಗ ಆಕೆಯ ಕೆನ್ನೆ ಕೆಂಪೇರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ನನ್ನ ಬೀದಿಯಲ್ಲೇ ಮೂರನೆಯ ಮನೆಯಲ್ಲಿ ಒಬ್ಬರಿದಾರೆ, ಅಲ್ಲ, ಇಬ್ಬರಿದಾರೆ. ಆತ ಸಂಜೆ ಮನೆ ಮುಂದೆ ಬಂದು ನಿಂತು ಒಂದು ರೀತಿಯಲ್ಲಿ ಕೆಮ್ಮುತ್ತಾರೆ, ಆ ಕೆಮ್ಮಿನಲ್ಲಿ ಶ್ಲೇಷ್ಮದ ಸಂಪರ್ಕವೇ ಕೇಳಿ ಬರುವುದಿಲ್ಲ. ಅದೊಂದು ತರಹದ ಪ್ರೇಮಗೀತೆ; ಒಲವಿನ ಉಲಿ!



ಆತ ಕೆಮ್ಮಿದಾಗ ಹೊರಹೊರಟ ಅಲೆಗಳು ಕಿಟಕಿ ಕಂಬಿಗಳ ನಡುವೆ ಮನೆಯೊಳಕ್ಕೆ ನುಗ್ಗಿದ ಕೂಡಲೇ ಆಕೆ ಹಾವಿನಂತೆ ಹರಿದು ಬಂದು ಬಾಗಿಲು ತೆರೆಯುತ್ತಾಳೆ ಹೊತ್ತಾಗಿ ಬಂದರೆ ಬುಸುಗುಟುವುದೂ ಉಂಟು!

ನಗುನಗುತ್ತಾ ಗೆಳೆಯರೊಂದಿಗೆ ಪರರ ಕಷ್ಟಗಳನ್ನು ವಿವರಿಸಿ ಸುಖಪಡುತ್ತಾ ಮನೆಬಾಗಿಲು ತನಕ ಬಂದ ಹಲವರು ಗುಮಾಸ್ತೆಯರು, ವರಾಂಡಾದ ಮೆಟ್ಟಿಲುಗಳನ್ನು ಹತ್ತುವ ಮೊದಲು ಅಂಗಿ ರುಮಾಲುಗಳನ್ನು ಸರಿಪಡಿಸಿಕೊಂಡು, ನಶ್ಯದ ಮೂಗನ್ನು ಮತ್ತೊಂದುಸಾರಿ ಒರಸಿ, ಕೊಡೆಯನ್ನು ಕೊಡವಿ ಕೊಂಕುಳಿಗೇರಿಸಿ, ಮುಖದಮೇಲೆ ಆದಷ್ಟು ಗೆಲುವನ್ನು ಸವರಿಕೊಂಡು, ಜೋಲನ್ನು ಸಾಧ್ಯವಾದಷ್ಟು ಮೇಲಕ್ಕೆಳೆದು, ಕೊಂಚ ಕುರುಡು ಧೈರ್ಯವನ್ನು ಅವಲಂಬಿಸಿ, ಸರಕ್ಕನೆ ಬಾಗಿಲನ್ನು ತಟ್ಟುತ್ತಾರೆ. ಬಾಯಲ್ಲೂ ಬಾಗಿಲು ಅಂತ ಹೇಳಬಹುದು. ಕೊಂಚ ಹೊತ್ತು ಕಾದು, ಅಲ್ಲೇ ನೇತಾಡುವ ಚಿಲಕದ ಸರಪಣಿಯನ್ನು ಮೆಲ್ಲಗೆ ಅಲ್ಲಾಡಿಸುತ್ತಾರೆ. ಒಳಗಿರುವ ಆದಿಶಕ್ತಿ "ಯಾರೂ!" ಎಂದು ಅರ್ಭಟಿಸಿದಾಗ ಬೀದಿಯಲ್ಲಿ ಹೋಗುವ ಪೋಲೀಸಿನವನಿಗೂ ನಡುಕ ಹತ್ತುವುದೆಂದರೆ ಪತಿದೇವರ ಗತಿ ಏನು?

ಅತ್ತೆ ಸೊಸೆಯರು ಜಗಳವಾಡುತ್ತಾ ಇರುವ ಸನಾತನರ ಮನೆಗಳ ಮುಂದೆ ನಿಂತು "ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಎಂಬ ಪಂಕ್ತಿಯನ್ನೂ "ಗೃಹಿಣೀಗೃಹ ಮುಚ್ಯತೆ" ಎಂಬ ಪಂಕ್ತಿಯನ್ನೂ ಸಮನ್ವಯ ಮಾಡುವುದಕ್ಕಾಗಿ, ಮಗನಾದ ಪತಿ, "ಬಾಗಿಲು" ಎಂದಲ್ಲದೆ ಮತ್ತೇನಂದಾನು? ಒಳಗಿನ ಜಗಳದಲ್ಲಿ ಗೆದ್ದವರು ಅತ್ತೆಯಾದರೆ, ಆ ದಿನ ಅತ್ತೆಯೇ ಬಾಗಿಲು!

ಅಲ್ಲ, ಸೋಲಿಸಿದ್ದು ಸೊಸೆಯೋ ಆದರೆ, ಸೊಸೆಯೋ ಬಾಗಿಲು !

ಇಷ್ಟೆಲ್ಲ ಇತರರ ಮೇಲೆ ಟೀಕಿಸುವ ನೀನು ಮನೆ ಮುಂದೆ ನಿಂತು ಏನು ಕೂಗುತ್ತೀಯಾ ಅಂತ ನನ್ನನ್ನ ಕೇಳಿದರೆ, ನಾನು ಯಾರನ್ನೂ ಕೂಗಬೇಕಾಗಿಲ್ಲ; “ಬಾಗಿಲು” ಅಂತಲೂ ಬಡಿದುಕೊಳ್ಳಬೇಕಾಗಿಲ್ಲ. ನಮ್ಮ ಮನೆಗೆ ಬಾಗಿಲೇ ಇಲ್ಲ. ನೆನ್ನೆ ಕಂದಾಯದ ಬಾಕಿಗಾಗಿ ಅದನ್ನ ಕಿತ್ತುಕೊಂಡು ಹೋದರು.

— ನಾ. ಕ.

‘ವೆಂಕಾಜಿ ಪಣ’

●

ವೆಂಕಾಜಿ ಹುಟ್ಟಿದ ಮನೆಯಲ್ಲಿ ಹೆಂಗಸರು ಮಕ್ಕಳು ಮೊದಲುಗೊಂಡು ಪಗಡೆಯಾಟದಲ್ಲಿ ಎಲ್ಲರೂ ನಿಸ್ಸೀಮರು. ತಾಯಿಮಕ್ಕಳು ಆಟವಾಡಿದರೆ ಎರಡು ಕೋಡುಬಳೆ ಪಣ ಇಟ್ಟು ಆಡುತ್ತಿದ್ದರು. ಅಕ್ಕತಂಗಿಯರಾಡಿದರೆ ಒಬ್ಬರು ಬಡಿಸುವುದು, ಸೋತವರು ಗೋಮೆ ಇಡುವುದು ಎಂದು ಪಣಕಟ್ಟಿ ಆಡುತ್ತಿದ್ದರು. ಗಂಡ ಹೆಂಡಿರಾಡಿದರೂ ಪಣಕಟ್ಟೇ ಆಡುತ್ತಿದ್ದರು. ಇಂಥಾ ಮನೆಯಲ್ಲಿ ಹುಟ್ಟಿದ ವೆಂಕಾಜಿಗೆ ಪಣ ಕಟ್ಟುವುದು ಸ್ವಾಭಾವಿಕವಾಗಿ ಬಂದುದು ಅಷ್ಟೇನೂ ಹೆಚ್ಚಲ್ಲ.

ವೆಂಕಾಜಿ ಕಷ್ಟಪಟ್ಟು ಕಾಲೇಜಿಗೆ ಬಂದಿದ್ದ. ಕಾಲೇಜಿನಲ್ಲಿ ಮಧ್ಯಾಹ್ನ ತಿಂಡಿಗೋಸ್ಕರ ಪಣ ಕಟ್ಟುವುದು ಆತನೇ ಆರಂಭಿಸಿದ್ದು ಈ ದಿನ ಸಂಸ್ಕೃತ ವಾದ್ಯಾರು ಹಸಿರುಶಾಲು ಹೊದ್ದುಕೊಂಡು ಬರುತ್ತಾರೆ. ಇಂಗ್ಲೀಷ್ ಮೇಷ್ಟ್ರು ಕಾಲುಚೀಲ ಇಲ್ಲದೆ ಬರೀ ಬೂಡ್ಸು ಹಾಕಿಕೊಂಡು ಬರುತ್ತಾರೆ. ಸಸ್ಯಶಾಸ್ತ್ರದವರು ಎಲೆಡಿಕೆ ಹಾಕಿಕೊಂಡು ಬರ್ತಾರೆ. ಈ ವಿಷಯಗಳಲ್ಲಿ ಪಣಕಟ್ಟಿ ಗೆದ್ದವನು, ಮಿಕ್ಕವನಿಂದ ಮಧ್ಯಾಹ್ನ ತಿಂಡಿ ಗಿಟ್ಟಿಸುತ್ತಿದ್ದನು. ವೆಂಕಾಜಿಯು ಇದರಲ್ಲಿ ನಿಸ್ಸೀಮ. ಹಲವಾರು ದಿನಗಳು ತಪ್ಪದೆ ತಿಂಡಿ ಗಿಟ್ಟಿಸಿದ. ಉಳಿದವರೆಲ್ಲರೂ ಇವನೊಡನೆ ಪಣ ಕಟ್ಟುವುದನ್ನೇ ಬಿಡಲು ಆರಂಭಿಸಿದರು.

ಆಗ ನೋಡಿ ವೆಂಕಾಜಿ ಒಂದು ಉಪಾಯ ಹುಡುಕಿದ. ಒಂದುದಿನ ಕಾಲೇಜಿಗೆ ಬಂದ. ಮಂಕ ಮೂರ್ತಿರಾಯ ಎಂದು ಪ್ರಸಿದ್ಧಿಯಾದವನನ್ನು ಹಿಡಿದ. ಅವನಿಗೆ ಹೇಳಿದ “ಲೋ? ಮೂರ್ತಿ ಇವತ್ತು ಮಧ್ಯಾಹ್ನ ಯಾರು ತಿಂಡಿಕೊಡಿಸ

ಬೇಕೆಂದು ನಮ್ಮಿಬ್ಬರಲ್ಲೇ ನಿರ್ಧರಿಸೋಣ. ಒಂದು ರೂಪಾಯಿ ಛಂಗು ಹಾರಿಸೋಣ ತಲೆಬಿದ್ದರೆ ನಾನು ಕೊಡಿಸುತ್ತೇನೆ. ಅಕ್ಷರ ಬಿದ್ದರೆ ನೀನು ಕೊಡಿಸು", ಮೂರ್ತಿ ಒಪ್ಪಿಕೊಂಡ. ಆದರೆ ತನ್ನ ರೂಪಾಯಿಯನ್ನೇ ಛಂಗಿಸೋಣ ಎಂದ. ವೆಂಕಾಜಿ ಒಪ್ಪಲಿಲ್ಲ. ನನ್ನ ರೂಪಾಯೇ ಛಂಗಿಸೋಣ ಎಂದ. ಕಡೆಗೆ ಇಬ್ಬರೂ ಒಂದೊಂದು ಬಾರಿ ಛಂಗಿಸುವುದು, ಎರಡು ಸಾರಿಯೂ ಒಂದೇ ತೆರನಾಗಿ ಬಿದ್ದರೆ ಅದರಂತೆ ನಡೆದು ಕೊಳ್ಳೋದು ಎಂದು ನಿರ್ಣಯಿಸಿದರು.

ಸರಿ ಮೊದಲು ವೆಂಕಾಜಿ ರೂಪಾಯಿ ಛಂಗಿಸಿದ. ತನ್ನ ರೂಪಾಯಿ. ಅಕ್ಷರ ಬಿತ್ತು.

ನಂತರ ಮೂರ್ತಿ ಛಂಗಿಸಿದ ಅವನ ರೂಪಾಯನ್ನ, ತಲೆ ಬಿತ್ತು.

ಇನ್ನೊಂದು ಬಾರಿ ಇಬ್ಬರೂ ಛಂಗಿಸಿದರು. ತಿರುಗಿ ವೆಂಕಾಜಿ ರೂಪಾಯಿ ಅಕ್ಷರ. ಮೂರ್ತಿ ರೂಪಾಯಿ ತಲೆ.

ಹೀಗೆಯೇ ಮೂರು ಸಾರಿ ಹಾಕಿದರು. ಮೂರು ಸಾರಿಯೂ ಅದೇ ಫಲಿತಾಂಶ.

ಮೂರ್ತಿ ಹೇಳಿದ ' ಲೋ ನಿನ್ನ ರೂಪಾಯಿ ಕೊಡು ನೋಡೋಣ ' ಎಂದು.

ಅದೇ ಕ್ಷಣದಲ್ಲೇ ವೆಂಕಾಜಿಯೂ ' ನಿನ್ನ ರೂಪಾಯಿ ಕೊಡೊ ನೋಡೋಣ' ಎಂದ.

* * * *

ಇಬ್ಬರೂ ಒಬ್ಬರ ಮುಖ ಒಬ್ಬರು ನೋಡಿದರು. ವೆಂಕಾಜಿ ಹೇಳಿದ "ಬೆಳಿಗ್ಗೆ ಬಂದಿದ್ದ ಆ ಬುಡು ಬುಡುಕೆಯವನ ಹತ್ತಿರ ನೀನೂ ಎರಡು ತಲೆ ರೂಪಾಯಿ ಕೊಂಡುಕೊಂಡೆಯಾ? ನಾನು ಎರಡೂ ಕಡೆ ಅಕ್ಷರ ಇದ್ದ ರೂಪಾಯಿಗೆ ಎರಡು ರೂಪಾಯಿ ಕೊಟ್ಟೆ ! ನೀನೆಷ್ಟು ಕೊಟ್ಟೆ '

"ನಾನು ಒಂದೂವರೆ ರೂಪಾಯಿ ಕೊಟ್ಟೆ ಕಣೊ—ಆದರೆ ಎಲ್ಲರೂ ಹೀಗೆ ತೆಗೆದುಕೊಂಡಿದ್ದರೆ ಕೆಟ್ಟೆವಲ್ಲೊ ? "

“ರಂಗೂನ್ ಸುಬ್ಬಯ್ಯರು . . . . . ಇಲ್ಲಿ ವಾಸವಾಗಿದ್ದರು”

ಮೂಗಿಗೆ ಕವಡೆ ಕಟ್ಟಿಕೊಂಡು ದುಡಿದು ದುಡಿದು ಬೇಸತ್ತಿದ್ದೆವು, ನಾವು ಮೂರುಜನ ಸ್ನೇಹಿತರು, ಒಂದು ವಿಮಾ ಕಛೇರಿಯಲ್ಲಿ. ನಾವುಗಳು ಅಲ್ಲಿ ಆರ್ಥಿಕ ನೌಕರರು. ಅಂಕಿ ಅಂಶಗಳನ್ನು ಬರೆದೂ ನೋಡೀ ಬರೆದೂ ಬರೆದೂ ‘ಸರ್ವಂ ಅಂಕಿ ಮಯಂ ಜಗತ್’ ಎಂಬುವಂತಾಗಿತ್ತು. ಮನೆಗೆ ಊಟಕ್ಕೆ ಹೋದರೆ ಎಲೆಯಲ್ಲಿ ಎಷ್ಟು ಅಗುಳಿದೆ ಎಂದು ಎಣಿಸಿ ನಂತರ ಉಣ್ಣುವಂತಾಗುತ್ತಿತ್ತು. ಎಲೆ ಅಡಿಕೆ ತಂದುಕೊಟ್ಟರೆ ಅಡಿಕೆ ಚೂರು ಎಣಿಸಿ ಬಾಯಿಗೆ ಹಾಕಿಕೊಳ್ಳುವ ಅಭ್ಯಾಸ ತಲೆದೋರಿತ್ತು. ಕಛೇರಿಗೆ ಹೋಗುತಾ ಹೋಗುತಾ ಎಷ್ಟು ಹೆಜ್ಜೆ ದೂರ ಮನೆಯಿಂದ ಕಛೇರಿಗೆ ಎಂದು ಎಣಿಕೆ ಪ್ರಾರಂಭವಾಗಿತ್ತು. ಮೂರು ಜನರೂ ಒಬ್ಬರನೊಬ್ಬರು ಪರಸ್ಪರವಾಗಿ ಪ್ರಶ್ನಿಸಿದೆವು. ಮೂವರಿಗೂ ಇದೇ ಜಾಡ್ಯ. ಮೂವರೂ ಒಟ್ಟಿಗೇ ನಮ್ಮ ಅಧಿಕಾರಿಯ ಬಳಿ ಹೋಗಿ ನಮ್ಮ ಜಾಡ್ಯವನ್ನು ವಿವರಿಸಿದೆವು. ಆತನೂ ನಮ್ಮ ಎಣಿಕೆಗಳನ್ನು, ಕೆಲಸವನ್ನು ಮೆಚ್ಚಿದುದರಿಂದ ನೀವು ಮೂವರೂ ನಮ್ಮ ವೈದ್ಯರಲ್ಲಿಗೆ ಹೋಗಿ ಆತನ ಸಲಹೆಯನ್ನು ಪಡೆಯಿರಿ ಎಂದನು. ವೈದ್ಯನ ಹತ್ತಿರ ಹೋಗಿ ರೋಗದ ಚಿಹ್ನೆಗಳನ್ನೂ ಖಾಯಿಲೆಯ ಕಾರಣವನ್ನು ವಿಶದೀಕರಿಸಿದೆವು. ಕಛೇರಿಯಿಂದ ದವಾಖಾನೆಯವರೆಗೂ ೧೭೮ ಹೆಜ್ಜೆಗಳಿಂದೂ ೪೦ ವಿದ್ಯುಚ್ಛಕ್ತಿಯ ಕಂಬಗಳಿವೆಯೆಂದೂ, ೧೨ ಮೋಟಾರುಗಳು ಹಾದುಹೋದುವೆಂದೂ ರುಜುವಾತುಕೊಟ್ಟೆವು. ಆತನೂ ನಿಧಾನವಾಗಿ ನಾವು ಹೇಳಿದ್ದನ್ನು ಕೇಳಿ ನೀವುಗಳೆಲ್ಲರೂ ಬಹಳವಾಗಿ ಕೆಲಸಮಾಡಿದ್ದೀರಿ, ಅಂಕಿಗಳೆಲ್ಲವೂ ಆತ್ಮಗತವಾಗಿವೆ ತಲೆಯೆಲ್ಲಾ ಲೆಕ್ಕಮಯವಾಗಿದೆ. ಈಗ ಎರಡು ಮೂರು ತಿಂಗಳು ರಜೆಪಡೆದು ಯಾವುದಾದರೂ ಹಳ್ಳಿಗೆ ಹೋಗಿ ನಿಮ್ಮ ಕೆಲಸದ ವಿಷಯವನ್ನೇ ಮರೆತುಬಿಡಿ. ರೋಗವು ಈಗ ತಾನೇ ಹುಟ್ಟಿರುವುದರಿಂದ ಬೇಗ ಗುಣವಾಗುತ್ತದೆ. ನಾನೂ ನಿಮ್ಮ ಅಧಿಕಾರಿಗೆ ಹೇಳಿ ರಜೆಯೂ ಸಂಬಳವೂ ದೊರಕುವಂತೆ ಮಾಡುತ್ತೇನೆ’ ಎಂದನು. ಆತನು ನಮ್ಮ ವಿಮಾ ಕಂಪನಿಯ ವೈದ್ಯನಾಗಿದುದರಿಂದ ನಾವುಗಳೇ ಆತನ ಹಣವನ್ನು ಸಲ್ಲಿಸುತ್ತಿದ್ದುದರಿಂದ ಆತನು ಅಧಿಕಾರಿಗೆ ತಾನೇ ಹೇಳಿದನು ನಮಗೆ ರಜವೂ ದೊರಕಿತು. ಮನೆಯಾಡಳಿತವನ್ನೆಲ್ಲಾ ವಿಸ್ತುಗೊಳಿಸಿ ಮೂವರೂ ಹಳ್ಳಿ ಪ್ರವಾಸಕ್ಕೆಂದು ಹೊರಟೆವು.

ದೇವರಾಯನ ಸಮುದ್ರದ ಹತ್ತಿರ ಒಂದು ಹಳ್ಳಿ ಇದೆಯೆಂದೂ ಅಲ್ಲಿನ ಹವಾ ಗುಣವು ಬಲು ಚೆನ್ನೆಂದೂ, ಅಲ್ಲಿ ಜೀವ ನವು ಸುಖಮಯವೆಂದೂ ನಮಗೆ ತಿಳಿಯಬಂತು. ಯೂರೋಪು ದೇಶಕ್ಕೆಲ್ಲಾ ಇಟಲಿಯು ಒಂದೇ ಹೇಗೆ ಅಡಿಗೆಯವರನ್ನು ಹೊಂದಿಸಿಕೊಡುತ್ತದೆಯೋ ಅಂತೆಯೇ ದೇವರಾಯ ಸಮುದ್ರಕ್ಕೆ ನಮ್ಮ ದೇಶಕ್ಕೆಲ್ಲಾ ನಳಪಾಕವನ್ನು ಸಜ್ಜುಗೊಳಿಸುವ ಖ್ಯಾತಿ. ಅಂದ ಮೇಲೆ ಅಲ್ಲಿನ ಹತ್ತಿರ ಹಳ್ಳಿಗೆ ಹೋದರೆ ಅಡಿಗೆ ಮನೆಯಲ್ಲೇ ನೆಲೆಸಿದಂತಾಗುವುದೆಂದು ಅಲ್ಲಿಗೆ ಹೊರಡಲು ಅನುಕೂಲಗಳನ್ನು ಮಾಡಿಕೊಂಡು ಹೊರಟೆವು.

ಹಳ್ಳಿಯಲ್ಲಿ ಒಂದು ಮನೆ ಬಿಡಿಸಿಕೊಂಡಿದ್ದೆವು. ಬೆಳಗ್ಗೆ ಹತ್ತು ಹನ್ನೊಂದು ಗಂಟೆಗೆ ಏಳುವುದು, ಮೆಲ್ಲಗೆ ಆಕಳಿಸುತ್ತಾ ಮುಖ ತೊಳೆದುಕೊಳ್ಳುವುದು, ಐಯ್ಯರು ಮಾಡಿಟ್ಟ ತಿಂಡಿ ತಿನ್ನುವುದು, ಒಂದು ಗಂಟೆಯತನಕ ಹರಟೆ ಹೊಡೆಯುವುದು, ಒಂದು ಗಂಟೆಗೆ ಊಟ, ಮಜ್ಜಿಗೆ ಅನ್ನ ಊಟಮಾಡುವ ಹೊತ್ತಿಗೆ ಚಾಪೆ ತಲೆದಿಂಬನ್ನು ಹುಡುಕಿಕೊಂಡು ತಿರುಗಿ ಮಲಗುವುದು, ನಾಲ್ಕು ನಾಲ್ಕೂವರೆ ಗಂಟೆಗೆ ಎದ್ದು ತಿರುಗಿ ಮುಖ ತೊಳೆದುಕೊಂಡು ಹಾಗೆಯೇ ಅಡ್ಡಾಡಿಕೊಂಡು ಬರಲು ಹೋಗುವುದು, ದಾರಿಯಲ್ಲಿ ಹಳ್ಳಿ ಹೋಟಲು ಎಲ್ಲಾದರೂ ಸಿಕ್ಕಿದರೆ ಅಲ್ಲಿ ದೋಸೆ ಕಾಫಿ ಮುಗಿಸಿ ಊರಾಚೆ ಮಾರಮ್ಮನ ದರ್ಶನ ಪಡೆದು ಕತ್ತಲಾಗುವ ವೇಳೆಗೆ ಮನೆ ಸೇರುವುದು, ಇದೇ ನಮ್ಮ ಅಹಃಚರಿ.

ಒಂದು ಸಾಯಂಕಾಲ ಹೀಗೆಯೇ ಗಾಳಿಸವಾರಿಗೆಂದು ಹೊರಟೆವು. ಯಾವುದೋ ಕಾಲುದಾರಿಯಲ್ಲಿ ಹೊರಟೆವು. ಎರಡು ಮೂರು ಮೈಲಿ ದೂರದಲ್ಲೇ ಇನ್ನೊಂದು ಹಳ್ಳಿ ಸಿಕ್ಕಿತು. ಅಲ್ಲಿ ಮೊದಲು ಸಿಕ್ಕಿದ್ದು ಒಂದು ಹಳ್ಳಿ ಹೋಟಲು. ಈ ಹಳ್ಳಿ ಹೋಟಲುಗಳಿಲ್ಲಾ ಒಂದು ಸೋಜಿಗ. "ದೋಸೆ ದೊರೆಯುತ್ತೆ" "ಕಾಫಿ ಕುಡಿಯಬಹುದು" ಎಂದು, ಇವೆಲ್ಲವೂ ಕೈಲಿ ಬರೆದ ಬೋರ್ಡುಗಳೇ. ಮನೆಯಾತನಿಗೆ ಮನೆತುಂಬ ಮಕ್ಕಳು. ಅವುಗಳಿಗೋಸ್ಕರ ನೂರು ಇನ್ನೂರು ದೋಸೆ ಮಾಡಲೇ ಬೇಕು, ಏನಾದರೂ ದೋಸೆ ಮಿಕ್ಕರೆ ಅವುಗಳನ್ನು ನೆರೆಯವರಿಗೆ ಹೊರಗಿನವರಿಗೆ ಮಾರಿದರೆ ಮಕ್ಕಳ ತಿಂಡಿಯ ಖರ್ಚು ಸಂಪಾದಿಸಿದಂತೆಯೇ. ಹಾಗಾಗಿ ಅಲ್ಲಲ್ಲೇ ಈ ಹಳ್ಳಿ ಹೋಟಲುಗಳು ಹುಟ್ಟಿಕೊಂಡು ಬೆಳೆದು ಬಂದಿರುತ್ತವೆ. ನಾವು ನೋಡಿದ ಹಳ್ಳಿ ಹೋಟಲು ಅಷ್ಟೇನೂ ಮನಸ್ಸನ್ನು ಆಕರ್ಷಿಸುತ್ತಿರಲಿಲ್ಲ. ಹಾಗಾಗಿ ಸ್ವಲ್ಪ ಮುಂದೆ ಹೋದೆವು. ಅಲ್ಲಿ ಒಂದು ತರಕಾರಿ ತೋಟ. ತೋಟವಲ್ಲೊಂದು ಗುಡಿಸಲು. ತೋಟದ ಹೆಬ್ಬಾಗಿಲಿನ ಹತ್ತಿರ ಒಂದು ಶಿಲಾ ಶಾಸನ.

"ರಂಗೂನ್ ಸುಬ್ಬೈಯರ್ ಇಲ್ಲಿ ವಾಸವಾಗಿದ್ದರು"

ಒಬ್ಬರನೊಬ್ಬರು ನೋಡಿದೆವು. ನಾವು ಯಾರೂ ಆತನ ಹೆಸರನ್ನು ಕೇಳಿರಲಿಲ್ಲ. ಶಿಲಾಶಾಸನ ಬೀಳಬೇಕಾದರೆ ಏನೋ ಮಹತ್ಕಾರ್ಯವನ್ನು ಆತನು ಮಾಡಿರ

ಲೇಬೇಕು. ಈ ಊರಿನವನು ಯಾರೋ ರಂಗೂನಿನಲ್ಲಿ ಹೋಟಲಿಟ್ಟು ಲಕ್ಷಾಧೀಧೀಶ್ವರನಾಗಿ ಸರ್ ಬಿರುದಾಂಕಿತನಾಗುವಂತಾಗಿದ್ದನೇನೋ ಅವನ ನೆನಪಿಗೆ ಇದಿರಬಹುದು ಎಂದೆ. ನನ್ನ ಮಿತ್ರನಂದನು "ಇಲ್ಲವಯ್ಯಾ ದೇಶಸೇವಕ ಸುಬ್ಬೈಯ್ಯರು ಗಡೀಪಾರಾಗಿ ರಂಗೂನಿನಲ್ಲಿ ನೆಲೆಸಿ ಚಿರಯಶಸ್ಸನ್ನು ಪಡೆದಿರಬಹುದು. ಹಾಗೆಯೂ ಒರಗಿರಬಹುದು" ಮೂರನೆಯವನು "ಇದೆಲ್ಲಾ ಏಕೆ ಆ ಹೋಟಲಿಗೆ ಹೋಗಿ ವಿಚಾರಿಸಿದರೆ ಗೊತ್ತಾಗುತ್ತೆ" ಎಂದನು.

ಕಡೆಯುವನ ಸೂಚನೆಯು ನ್ಯಾಯವಾಗಿತ್ತು. ಹಾಗೆಯೇ ನಾವೂ ಆ ಹೋಟಲಿಗೆ ಹೋದೆವು. ಅಲ್ಲಿ ಒಬ್ಬ ೧೦-೧೮ ವರ್ಷದ ಬುಡಮೇಕಾಯಿನಂತಿದ್ದ ಐಯ್ಯರ ಹುಡುಗನು ನಮ್ಮ ದೋಸೆ ಕಾಫಿ ತರಲು ಒಪ್ಪಿ ಒಳಗೆ ಹೋಗಿ ಸುದ್ದಿ ಹೇಳಿ ಹೊರಕ್ಕೆ ಬಂದನು. ದೋಸೆ ತರುವುದರೊಳಗೆ ಇವನನ್ನು ಕೇಳಿದೆವು. "ಅಯ್ಯಾ ರಂಗೂನ್ ಸುಬ್ಬೈಯ್ಯರು ಯಾರು? ನಾವು ತಿಳಿವಳಿಕಸ್ಥರಲ್ಲ ಪ್ರಪಂಚಜ್ಞಾನ ಕಡಿಮೆ ಅವರು ಕವಿಗಳೇ? ನಟರೇ? ರಾಜಕಾರಣ ಪಟುಗಳೇ? ಹೊನ್ನಿನ ಶಿಲ್ಪಿಗಳೇ?"

ಆತನಂದನು "ಅಯ್ಯೋ ರಂಗೂನ್ ಸುಬ್ಬೈಯ್ಯರು ಕಲಾಕೋವಿದರಲ್ಲ ನೀವೇನೂ ಮನಸ್ಸು ಖಿನ್ನಮಾಡಿಕೊಳ್ಳಬೇಡಿ. ಆತನ ಕೀರ್ತಿಯು ದೇಶವನ್ನೆಲ್ಲಾ ಹರಡಿಲ್ಲ. ಒಂದು ತೆರನಾಗಿ ಈ ಹಳ್ಳಿಯಲ್ಲೇ ಪ್ರಾಮುಖ್ಯ ಆತನಿಗೆ.

ಈ ಹಳ್ಳಿಯಲ್ಲೇ ಹುಟ್ಟಿ ಬೆಳೆದವರು. ಅವರು ಊರುಬಿಟ್ಟು ಹೋಗಿಲ್ಲ. ಒಂದು ತರಕಾರಿ ತೋಟವನ್ನು ನಿರ್ಮಿಸಿ ರಂಗೂನ್ ತರಕಾರಿಗಳನ್ನೆಲ್ಲಾ ಬೆಳೆಯುತ್ತಾರೆ. ಅವುಗಳನ್ನೆಲ್ಲಾ ಕೋಲಾರ ಬೆಂಗಳೂರಿಗೆ ಕಳಿಸುತ್ತಾರೆ. ಅವರ ತರಕಾರಿ ಎಂದರೆ ಪ್ರಸಿದ್ಧಿ ಅವು ಅಷ್ಟು ಪುಷ್ಟಿಕರ."

"ಅವರು ಯಾವಾಗ ಬದುಕಿದ್ದರು. ಯಾವ ಮನೆಯಲ್ಲಿ"

"ಅವರು ಆ ಗುಡಿಸಿಲಲ್ಲಿ ಜೀವನವನ್ನು ಆರಂಭಮಾಡಿದರು. ಈಗ ಈ ಮನೆಯಲ್ಲೇ ಇದ್ದಾರೆ. ಅಗೋ ನೋಡಿ ತೋಟದಲ್ಲಿ ಕಳೆ ಕೀಳುತಿದ್ದಾರಲ್ಲ ಅವರೇ ರಂಗೂನ್ ಸುಬ್ಬೈಯ್ಯರು ಅವರೇ ನನ್ನ ತಂದೆ. ಅವರೇ ಹೇಳಿದ್ದು ಈ ರೀತಿ ಆ ತರಕಾರಿ ತೋಟದ ಹತ್ತಿರ ಶಿಲಾ ಶಾಸನ ಹಾಕಬೇಕೆಂದು"

ಅಷ್ಟುಹೊತ್ತಿಗೆ ಬಳೆ ಶಬ್ದದೊಂದಿಗೆ 'ದೋಸೆ ಆಯಿರ್ಕುದೊ' ಎಂಬ ಮಧುರ ವಾಣಿಯು ಕೇಳಿಸಿತು. ಬುಡುಮೇಕಾಯಿ ಅಯ್ಯರು ಒಳಗೆಹೋದ, ದೋಸೆ ಪಲ್ಯ ತರಲು. ನಾವೂ ರಂಗೂನ್ ಸುಬ್ಬೈಯರ ವ್ಯಾಪಾರ ಚಮತ್ಕಾರಕ್ಕೆ ಸೋತಿದ್ದೆವು. ಆ ಶಿಲಾ ಶಾಸನವನ್ನು ಅರ್ಥಮಾಡಲೋಸುಗವೇ ನಾವೂ ಆ ಹೊಟೇಲಿಗೆ ಹೋಗಿದ್ದುದು.

ಆ ವೇಳೆಗೆ ದೋಸೆ ಪಲ್ಯ ಬಂತು. ಪಲ್ಯ ವಿಧವಿಧ ರಂಗೂನ್ ತರಕಾರಿಯಿಂದ ಮಾಡಲ್ಪಟ್ಟಿತ್ತು. ಕತೆಯನ್ನು

ಕೇಳಿದ ನಮಗೆ ದಿಟವಾಗಲೂ ಬಲು ರುಚಿಯಾಗಿತ್ತು.

ತಿಂಪನಂತರ ರಂಗೂನ್ ಸುಬ್ಬೈಯ್ಯರನ್ನು ಮಾತನಾಡಿಸಿದೆವು. ಅವನ ಬುದ್ಧಿ, ವ್ಯಾಪಾರ ಚಮತ್ಕಾರವನ್ನು ಹೊಗಳಿದೆವು.

* * *

ಹಿಂತಿರುಗಿ ಬರುವಾಗ್ಯೆ ಆ ಹಳ್ಳಿ-ತಾಲ್ಲೂಕಿಗೆಲ್ಲಾ ಸುಬ್ಬೈಯ್ಯರನ್ನೇ ವಿಮಾ ಏಜಂಟರನ್ನಾಗಿ ಮಾಡಿ ಒಪ್ಪಿಸಿದ್ದೆವು.



"ಅದೆಲ್ಲಾ ಒಪ್ಪಿದೆ. ಆದರೆ ಬೇರೆ ಯಾವ ಕೆಲಸಕ್ಕೂ ಲಾಯಕ್ಕಲ್ಲ ಅನ್ನುವುದೂ ಒಂದು ಗುಣ ನಿನ್ನಲ್ಲಿ. ಅದನ್ನೂ ಹೇಳಿಕೊ."

ಅಂಕಿ ಭವಿಷ್ಯ

[ನಕ್ಷತ್ರಗಳನ್ನು ತಿಳಿಯುವ ಮೊದಲೇ ಅಂಕಿಗಳನ್ನು ನಮ್ಮ ಪೂರ್ವೀಕರು ಕಂಡುಹಿಡಿದು ಅಂಕಿಶಾಸ್ತ್ರವನ್ನು ಪ್ರವರ್ಧಮಾನಕ್ಕೆ ತಂದರು. ಅಂಕಿಗಳಿಂದ ಮನುಷ್ಯನ ಭೂತ, ವರ್ತಮಾನ, ಭವಿಷ್ಯಗಳನ್ನು ಕಂಡುಹಿಡಿಯುವ ಶಾಸ್ತ್ರವನ್ನು ರಚಿಸಿದರು. ಈ ಅಂಕಿ ಶಾಸ್ತ್ರವು ಬಹಳಮಟ್ಟಿಗೆ ಪುರಾತನವಾದುದರಿಂದ ಇದನ್ನು ತಿಳಿಯಲು ಬಹಳ ಬುದ್ಧಿ ಇರಬೇಕಾದುದರಿಂದ ಇಲ್ಲಿನವರೆಗೂ ಇದು ಜನಸಾಮಾನ್ಯದ ಆಚರಣೆಗೆ ಬಂದಿಲ್ಲ. ಪುರಾತನ ಶಾಸ್ತ್ರವು ಹೀಗೆ ನಾಶವಾಗಬಾರದೆಂದು ಈ ಅಂಕಿಶಾಸ್ತ್ರವನ್ನು ಸುಲಭರೀತಿಯಲ್ಲಿ ಅಂಕಿಶಾಸ್ತ್ರ ವಿಶಾರದ ನಂಬರಾದುರಂಧರ ಶ್ರೀಯುತ ಮಾರ್ಕಸಹಾಯರಿಂದ ಬರೆಸಿದ್ದೇವೆ. ವಾಚಕ ಮಹಾಶಯರು ಇದನ್ನೋದಿಕೊಂಡು ಅಂಕಾಮೃತವನ್ನು ಸವಿದು, ತಮ್ಮ ಇಹಪರದ ಭವಿಷ್ಯವನ್ನು ತಿಳಿಯಲೆಂದೇ ನಮ್ಮ ಹಾರೈಕೆ. . ಲೇಖಕ]

ಅಂಕಿಗಳಲ್ಲಿ ನಮ್ಮ ಶಾಸ್ತ್ರಕ್ಕೆ ಏಕ ಅಂಕಿಗಳೇ ಮುಖ್ಯ. ಯಾವುದಾದರೂ ಅಂಕಿಯು ಇಪ್ಪತ್ತುಮೂರು ಎಂದು ಜೋಡಿ ಅಂಕಿ ಬಂದರೆ ತಕ್ಷಣ ಅವುಗಳನ್ನು ಕೂಡಿ ಐದು ಎಂದು ಒಂದಂಕಿಗೆ ತರ್ಜುಮೆಗೈಯಬೇಕು. ಒಬ್ಬೊಬ್ಬ ಮನುಷ್ಯನಿಗೂ ಒಂದೊಂದು ಹುಟ್ಟುಅಂಕಿ ಇರುತ್ತದೆ. ಅವನು ಹುಟ್ಟಿದ ತಾರೀಖನ್ನು ಕೂಡಿಸಿದರೆ ಈ ಹುಟ್ಟುಅಂಕಿ ಸಿಗುತ್ತದೆ. ಇದೂ ಅವನ ಹುಟ್ಟುಮಚ್ಚೆಯಿರುವಂತೆ ಈ ಹುಟ್ಟುಅಂಕಿಯಿಂದಲೇ ಅವನ ಭವಿಷ್ಯವನ್ನು ಹೇಳಬೇಕು.

ಮಸಲ ಒಬ್ಬನು ೧೦-೬-೧೯೨೨ ರಲ್ಲಿ ಹುಟ್ಟಿದ ಎಂದುಕೊಳ್ಳೋಣ. ಅವನು ಹುಟ್ಟು ಅಂಕಿ ಮೂರು. ಅಂದಮೇಲೆ ಅವನಿಗೆ ಆರು ಒಂಭತ್ತು ಸಹಾಯ ಅಂಕಿಗಳು. ನಾಲ್ಕು ಎಂಟು ದ್ವೇಷಾಂಕಿಗಳು. ಅಂದರೆ ಮೂರು ಆರು ಒಂಭತ್ತು ಬರುವ ದಿನ ಮಾಸ ಪಕ್ಷಗಳು ಒಳ್ಳೆಯದು. ನಾಲ್ಕು ಎಂಟು ಕೆಟ್ಟವು. ಮಿಕ್ಕ ಅಂಕಿಗಳು ನಪುಂಸಕ.

ಇದರಿಂದ ಏನು ಭವಿಷ್ಯ ಎನ್ನಬಹುದು. ನೋಡಿ ಇಂತಹವನು ಪರೀಕ್ಷೆಗೆ ಹೋಗಬೇಕಾಯಿತು ಎನ್ನಿ. ಅವನು ತಾನು ಕೂಡುವ ಬಸ್ಸಿನ ನಂಬರಾದ ೮೨೯೯ನ್ನು ಲೆಕ್ಕಮಾಡಿ 'ನಾಲ್ಕು' ಉತ್ತರ ಪಡೆಯುತ್ತಾನೆ. ಅವನ ಹುಟ್ಟಂಕಿ ಮೂರು. ಆದಕಾರಣ ಈ ಬಸ್ಸಿನಲ್ಲಿ ಹೋದರೆ ಪರೀಕ್ಷೆಯಲ್ಲಿ ಪಲ್ಟಿ. ಹಾಗಾಗಿ ೮೬೦೧ ನಂಬರ ಬಸ್ಸು ಬರುವತನಕ ಕಾಯುತ್ತಾನೆ. ಅಷ್ಟು ಹೊತ್ತಿಗೆ ಅರ್ಧ ಪರೀಕ್ಷೆ ಮುಗಿದು ಹೋಗಿರುತ್ತೆ. ಕೈತೋರಿಸಿ ಅವಲಕ್ಷಣ ಎನ್ನಿಸಿಕೊಳ್ಳುವುದು ತಪ್ಪಿಹೋಗುತ್ತೆ.

ಇದೇ ರೀತಿ ಮದುವೆಗೆ ಹೊರಡುವಾಗ, ಮಾರ್ವಾಡಿ ಬಳಿಗೆ ಹೋಗುವಾಗ, ಮಾವನ ಮನೆಗೆ ಮೊದಲಬಾರಿ ಹೋಗುವಾಗ, ಮುಖ್ಯ ಕಷ್ಟಕಾಲ ಒದಗಿದಾಗಲೆಲ್ಲಾ, ಈ ಅಂಕಿಗಳ ಭವಿಷ್ಯವಾಣಿಯಿಂದ, ಬರುವ ಕಷ್ಟವನ್ನು ನೀಗಿಸಿಕೊಳ್ಳಬಹುದು.

ಈ ಶಾಸ್ತ್ರದಲ್ಲಿ ಮುಖ್ಯವಾದ ಸಂಗತಿಗಳು ಕೆಲವು.

೩-೬-೯ ಸ್ನೇಹ ಅಂಕಿಗಳು—ಗುರು, ಬುಧರಿದ್ದಂತೆ.

೪-೮ ವ್ಯತಿರಿಕ್ತ ಅಂಕಿಗಳು—ಗುರು-ಶಿಷ್ಯರಿದ್ದಂತೆ.

೭-೧೧ ಬೇಜಾರಿನ ಅಂಕಿಗಳು—ಶಿಷ್ಯ-ಶಿಷ್ಯರಿದ್ದಂತೆ.

೧-೨ ಸ್ನೇಹಾಂಕಿಗಳು—ಶಿಷ್ಯ-ಶಿಷ್ಯಾಣಿಯಂತೆ.

೫ ನಪುಂಸಕಾಂಕಿ—ಇದಕ್ಕೆ ಜತೆಯೇ ಇಲ್ಲ.

ಇವರ ಪ್ರಕಾರ ನಿಮ್ಮ ಹುಟ್ಟಂಕಿಯನ್ನು ಕಂಡುಹಿಡಿದುಕೊಳ್ಳಿ. ನಿಮಗೆ ಕೆಟ್ಟವಾದ ತಾರೀಖನ್ನೆಲ್ಲಾ ಬರೆಯಿರಿ. ನಿಮಗೆ ಒಳ್ಳೆಯದಾದ ಅಂಕಿಗಳನ್ನೂ ತಯಾರಿಸಿ. ಆಮೇಲೆ ಹೋಲಿಸಿ ನೋಡಿ. ಇದರ ಮರ್ಮವು ಮುಂದಟ್ಟಾಗುವುದು. ಉದಾಹರಣೆಗೆ ಹೆಬ್ಬಿಗುಬ್ಬಾಲೆಯ ಪ್ರಚಂಡ ಪುರುಷನಾದ ಹಣಮಂತಯ್ಯನ ಅಂಕಿ ಜಾತಕ ಹೇಳುತ್ತೇನೆ ಕೇಳಿ.

ಆತನು ಹುಟ್ಟಿದ್ದು ಫಾಲ್ಗುಣ ಶುದ್ಧ ಪೌರ್ಣಮಿ. ಇದರ ಹುಟ್ಟು ಅಂಕಿ ೪. ಆತನಿಗೆ ಮದುವೆಯಾದದ್ದು ೧೭ನೇ ವರುಷ. ವಿವಾಹಾಂಕಿ ೮—ಆತನು ಕೆಲಸಕ್ಕೆ ಸೇರಿದ್ದು ೨೮ನೇ ವರುಷ. ಕಾರ್ಯಾಂಕಿ ೧—ಸಸ್ಪೆಂಡ್ ಆಗಿದ್ದು ೨೯ನೇ ವರ್ಷ ಜನ್ಯ ಅಂಕಿ ೨-ಅಂದರೆ ಹುಟ್ಟಂಕಿಯ ಅರ್ಧ. ಸೆರೆಮನೆ ಸೇರಿ ಸುಖವಾಗಿದ್ದದ್ದು ೩೦ ವರ್ಷ—ಹುಟ್ಟಂಕಿ ೩.

ಈಗ ನೋಡಿ ೪-೮ ವ್ಯತಿರಿಕ್ತ ಕೆಟ್ಟದ್ದಾಯಿತು.
೪-೧ ಸ್ನೇಹಾಂಕಿ ಕೆಲಸ ಸಿಕ್ಕಿತು.
೪-೨ ವ್ಯತಿರಿಕ್ತ ಸಸ್ಪೆಂಡು.
೪-೩ ಪ್ರೇಮಾಂಕಿ ಸೆರೆಮನೆ ಸುಖ.

ಈಗ ಹಣಮಂತಯ್ಯನು ಏನು ಕೆಲಸ ಮಾಡಬೇಕಾದರೂ ಈ ಅಂಕಿಗಳನ್ನು ನೋಡಿಕೊಂಡೇ ಕೆಲಸಕ್ಕೆ ಕೈಹಾಕುವನು.

ಇದೇನಯ್ಯಾ! ಇಷ್ಟೆಲ್ಲಾ ಬರೆದಿದ್ದೀ. ಇದು ಬರೀ ಊಹೆಯ ಕತೆ. ಅಂಕಿಗಳ ಅರಣ್ಯ-ನಂಬರ ನಾಟಕ ಎನ್ನಬಹುದು. ಆದರೆ ಸ್ವಲ್ಪ ಇಳಿಮುಖವಾದ, ಅದೃಷ್ಟ ಹಿಮ್ಮೆಟ್ಟಿದ್ದವರ ಸ್ನೇಹ ಮಾಡಿನೋಡಿ. ನಕ್ಷತ್ರಗಳು, ರಾಶಿಗಳು, ಕೇಂದ್ರಗಳನ್ನು ಕಟ್ಟಿಕೊಂಡು ತೂರಾಡುವ ಹಾಗೆಯೇ, ಎಷ್ಟೋ ಜನರು ಈ ಅಂಕಿಗಳನ್ನು ಹಿಡಿದುಕೊಂಡು ನೇಣುಹಾಕಿಕೊಳ್ಳುತ್ತಾರೆ. ಹಾಗೆ ನೇಣು ಹಾಕಿಕೊಳ್ಳುವಾಗಲೂ ತಮ್ಮ ಹುಟ್ಟಂಕಿಗೆ ಸರಿನೋಡಿಕೊಂಡೇ ನೇಣುಹಾಕಿಕೊಳ್ಳುತ್ತಾರೆ.

* * * *

ನೀವೆನ್ನಬಹುದು. ನಿನ್ನ ಹುಟ್ಟಂಕಿ ಏನು ಎಂದು. ನನ್ನ ಹುಟ್ಟಂಕಿ ೫ ಅದಕ್ಕಾಗಿಯೇ ಅಂಕಿಗಳ ಪುರುಷತ್ವದಲ್ಲಿ ನನಗೆ ನಂಬಿಕೆಯೇ ಇಲ್ಲ.

"ರಾಮು" "ಲಚ್ಮಣ್ರಾರು"

"ಒಕಾಡಿ ಹೇಳಬಾರದು ಅಂತ ಅಮ್ಮ ಹೇಳಿಲ್ಲವೇನೋ?"

"ಹೇಳಿದಾಳೆ. ಆದರೆ ನೀನು ಯಾಕೆ ಸುಳ್ಳು ಹೇಳಿದೆ?"

"ಹುಂ. ಹೇಳಿದೆ? ನಿಜ ಹೇಳಿದರೆ ಅಮ್ಮ ಒದೆಯುತ್ತಾಳಲ್ಲಾ!"

"ಒದೆಸಿಕೊ!"

"ಹುಂ. ನನಗೇನು? ಹೊಟ್ಟೆ ಬೇರೆ ನೋಯುತ್ತಿದೆ ವಿಪರೀತ."

"ಹೊಟ್ಟೆ ನೊಂದರೆ ಒಳ್ಳೆಯದೇ?"

"ಅದು ಹೇಗೆ?"

"ಆಸ್ಪತ್ರೆಯಲ್ಲಿ ಪೆಪ್ಪರ್ಮಿಂಟೌಷಧಿ ಕೊಡುತ್ತಾರೆ."

"ಆದರೆ ನಾನು ಅಮ್ಮನಿಗೆ ಹೇಳುವ ಹಾಗಿಲ್ಲವಲ್ಲಾ, ಹೊಟ್ಟೆನೋವು, ಅಂತ"

"ಅಮ್ಮನಿಗೆ ಗೊತ್ತಿಲ್ಲವೇನು,ಹಾಗಾದರೆ?

"ಇಲ್ಲ! ನಾನು ನಾಲ್ಕು ಕೋಡುಬಳೆ ತಿಂದೆ ಅಂತ ನೀನು ಹೇಳಿದಾಗ, ಅಮ್ಮ ನನ್ನನ್ನ ಎಳೆದುಕೊಂಡು ಹೋಗಿ ಕೆನ್ನೆಗೆರಡು ಬಿಟ್ಟಳು. ಡಾಕ್ಟರು ಬರೀ ನೀರು ಹಾಲು ಕೊಡಿ ಅಂತ ಹೇಳಿದ್ದರೂ ಕೂಡ, ಒಂದು ತಿಂಗಳಿಂದ ಖಾಯಿಲೆ ಬಿದ್ದಿದ್ದ ಮಗು ಅಂತ ಎರಡೇ ಎರಡು ತಿನ್ನು ಅಂತ ಒಪ್ಪಿದ್ದಳಂತೆ. 'ಹೊಟ್ಟೆ ನೋಯುತ್ತೇನೋ?' ಅಂತ ಕೇಳಿದಳು. ನಾನು 'ಇಲ್ಲ' ಅಂತ ತಲೆ ಅಲ್ಲಾಡಿಸಿದೆ."

"ನೀನು ಮಾಡಿದ್ದೂ ಸುಳ್ಳು! ಆಡಿದ್ದೂ ಸುಳ್ಳು! ನೋಡು! ನಿನ್ನನ್ನ ಖಂಡಿತವಾಗಿಯೂ ನರಕಕ್ಕೆ ಕಳುಹಿಸುತ್ತಾರೆ."

"ನರಕ ಅಂದರೆ ಏನೋ?"

"ನರಕ ಅಂದರೆ ಕತ್ತಲೆ ಮನೆ, ದೊಡ್ಡದು! ಅಲ್ಲಿ ನಮ್ಮ ಶೀತಕ್ಕನ ಹಾಗೆ ಮೂರು ನಾಲ್ಕು ಜನ ಇರುತ್ತಾರೆ. ಇರುವೆ ಬಹಳ, ದಿನಕ್ಕೆರಡು ಸಲ ತಣ್ಣೀರು ಸ್ನಾನ ಮಾಡಿಸುತ್ತಾರೆ. ಎರೆಯುವಾಗ ಕಣ್ಣಿಗೆ ಸೀಗೆ ಪುಡಿ ತುಂಬ ಬೀಳುತ್ತದೆ. ಊಟಕ್ಕೆ ದಿನವೂ ಹಾಗಲು ಕಾಯಿ ಗೊಜ್ಜು. ಪಾಯಸಾನ ಒಂದೇ ಒಂದು ಚಮಚ ಬಡಿಸುತ್ತಾರೆ. ಅಲ್ಲಿ ಎರಡು ಕೋಡುಬಳೆ ಅಂದರೆ ಎರಡೇ ಎರಡು."

"ನನ್ನನ್ನ ಯಾವಾಗ ಕೂಡಿಸುತ್ತಾರೋ ಕತ್ತಲೆ ಮನೆಯಲ್ಲಿ, ಅಲ್ಲ, ನರಕದಲ್ಲಿ?"

"ಸತ್ತ ಮೇಲೆ!"

"ಹಾಗಾದರೆ ನಾನು ಸಾಯುವುದೇ ಇಲ್ಲ."

"ಓ ಹೋ ಹೋ! ಅದೆಲ್ಲಾ ನಡೆಯುವುದಿಲ್ಲ."

"ಯಾಕೆ?"

"ಅಮ್ಮಾ ಅನ್ನಲಿಲ್ಲವೇನೋ ನಿನ್ನೆ ಅಣ್ಣನ ಹತ್ತಿರ, 'ಮೂರು ಹೊತ್ತೂ

ಇವನು ಕೋಡುಬಳೆ ಕೋಡುಬಳೆ ಅಂತ ಸಾಯುತ್ತಿದ್ದಾನೆ, ಅಂತ."

"ಹೌದು."

"ಸರಿ, ಮುತ್ತೈ. ಯಾವಾಗಲಾದರೂ ಒಂದು ಸಾರಿ ಸತ್ತಾಗ ನಿನ್ನನ್ನ ಹಿಡಿದು ಕೊಂಡು ಹೋಗಿ ನರಕಕ್ಕೆ ಹಾಕುತ್ತಾರೆ."

"ಲೋ! ತಪ್ಪಿಸಿಕೊಳ್ಳೋದಕ್ಕೆಏನೋ ಉಪಾಯ? ಅಣ್ಣನ ಹಾಗೆ ಅವರು ಬರುವಾಗ ಮನೆಯಲ್ಲಿಲ್ಲ ಅಂತ ಅಮ್ಮನ ಹತ್ತಿರ ಹೇಳಿಸಿಬಿಡುತ್ತೇನೆ."

"ಅದೆಲ್ಲಾ ನಡಿಯುವುದಿಲ್ಲ. ಹೊರಡು ಅಂದರೆ ಹೊರಡಲೇಬೇಕು, ಸುಳ್ಳು ಹೇಳಿದವರೆಲ್ಲರೂ."

"ಚಾಡಿ ಹೇಳಿದವರನ್ನೂ ಬಿಡುವುದಿಲ್ಲ ಅವರು. ಜೊತೆಯಲ್ಲೇ ಎಳೆದು ಕೊಂಡು ಹೋಗುತ್ತಾರೆ."

"ನಾನಾಗಲೇ ನರಸಿಂಹದೇವರಿಗೆ ನಮಸ್ಕಾರ ಮಾಡಿದೇನೆ."

"ಅವರು ಯಾರೋ ಅವರು?"

"ತನ್ನ ಮಗನನ್ನ ಯಾರೋ ಒಬ್ಬರು ನರಕಕ್ಕೆ ಕಳುಹಿಸಿದರಂತೆ, ಅವರನ್ನ ಹಿಡಿದುಕೊಂಡು ಚೆನ್ನಾಗಿ ಹೊಟ್ಟೆ ಕಿವುಚಿದರಂತೆ ಅವರು."

"ಎಷ್ಟು ವರ್ಷ ಆ ಹುಡುಗನಿಗೆ?"

"ನಮ್ಮಷ್ಟೇ ವರ್ಷ."

"ಹಾಗಾದರೆ ನಾನೂ ನಮಸ್ಕಾರ ಮಾಡುತ್ತೇನೆ. ಎಲ್ಲಿದಾರೆ ಅವರು?"

"ದೇವಸ್ಥಾನದಲ್ಲಿ."

"ಆದರೆ ಅಣ್ಣನ ಹೊಟ್ಟೆ ಮೇಲೆ ಹೊಡೆದರೆ ಏನು ಮಾಡುವುದು?"

"ನಮ್ಮನ್ನ ನರಕಕ್ಕೆ ಕಳುಹಿಸಿದರೆ ಆ ದೇವರು ಕಂಬದ ಮೊರೆಯಿಂದ ಬಂದು ಹೊಡೆಯುತ್ತಾರೆ, ಅಷ್ಟೆ. ನಾವು ಮನೆಯಲ್ಲಿಲ್ಲ. ನಾವು ಸತ್ತಿಲ್ಲ ಅಂತ ಹೇಳಿ ಕಳುಹಿಸಿಬಿಟ್ಟರೆ ದೇವರು ಅಣ್ಣನನ್ನು ಏನೂ ಮಾಡುವುದಿಲ್ಲ."

"ಹಾಗಾದರೆ, ನಮ್ಮ ಅಣ್ಣನಿಗೆ ಮೊದಲೇ ಹೇಳಿಬಿಡೋಣ. ಬಾ, ಆ ಮೇಲೆ ದೇವಸ್ಥಾನಕ್ಕೆ ಹೋಗೋಣ."

ನಾ ಕ.

ಹಿಟ್ಲರನಿಗೆ ಲೆಕ್ಕವೇ ಗೊತ್ತಿಲ್ಲವಂತೆ. ಅದಕ್ಕೇ ಅಮೆರಿಕನರ ಸಂಖ್ಯಾ ಸೊಬಗಿಗೆ ಅವನು ಹೆದರಿಲ್ಲ!

* * *

ಮದ್ರಾಸಿನ ಜನರು ಊರು ಬಿಟ್ಟು ಹೋಗುವುದಕ್ಕೂ, ಅಲ್ಲಿಗೆ ಹೊಸದಾಗಿ ನಾಲ್ವರು ಜ್ಯೋ ವೈದ್ಯರು ಬಂದಿರುವುದಕ್ಕೂ ಏನೂ ಸಂಬಂಧವಿಲ್ಲವೆಂದು ಖಂಡಿತವಾಗಿ ಗೊತ್ತಾಗಿದೆ.

* * *

ಈ ಯುದ್ಧ ಮುಗಿಯುವುದರಿಂದ ಒಂದೇಒಂದು ತೊಂದರೆ.

ಯುದ್ಧದ ವಿಚಾರದ ಪುಸ್ತಕಗಳು ಹೇರಳವಾಗಿ ಹೊರಬೀಳುವುವು.

ವಿನಶ್ಯತಿ

ಶೇಷಗಿರಿ ತಬ್ಬಲಿಯಾದದ್ದು ಹೇಗೆ ಅಂತ ಭಗವದ್ಗೀತೆಯಲ್ಲೇ ಹೇಳಿದೆ. ತಾಯಿ ಖಾಯಿಲೆಬಿದ್ದಾಗ ಅವನು ಹುಣಸೂರಲ್ಲಿದ್ದ. ಅಲ್ಲಿಯ ಆರೇಳು ವೈದ್ಯರ ಪೈಕಿ ಯಾರನ್ನು ಕರೆಸಿ ಔಷಧಿ ತೆಗೆದುಕೊಳ್ಳುವುದು ಎಂಬ ಸಂದೇಹ ನಿವೃತ್ತಿಯಾಗುವುದರೊಳಗೆ ಆಕೆ ಕಣ್ಣು ಮುಚ್ಚಿಕೊಂಡುಬಿಟ್ಟರು. ಹಾಗೆಯೇ ಸಂತೇಪೇಟೆ ರಸ್ತೆಯ ನಟ್ಟನಡುವೆ ನಿಂತುಕೊಂಡು ಮೋಟಾರು ಲಾರಿಯನ್ನು ತಪ್ಪಿಸಿಕೊಳ್ಳಲು ಬಲಕ್ಕೆ ತಿರುಗುವುದು ಕ್ಷೇಮವೋ ಎಡಕ್ಕೆ ಹಾರುವುದು ಮೇಲೋ ಎಂದು ಸಂಶಯಪಡುವಾಗಲೇ ಅವನ ತಂದೆಯೂ ಕಾಲವಶರಾದರು. ಗೀತಾವಾಕ್ಯದಂತೆ, ಸಂಶಯಾತ್ಮಾ ....? ಈ ಲೇಖನದ ಶಿರೋನಾಮೆಯನ್ನು ಓದಿ.

ಶೇಷಗಿರಿಗೂ ಅದೇ ಚಾಳಿ. ಅವನದೂ ಕೂಡ ಅನುಮಾನಸ್ವಭಾವವೇ. ಬೇಕೋ ಬೇಡವೊ, ಸರಿಯೋ ತಪ್ಪೋ, ಸಾಕೋ ಬೇಕೋ, ಬಹುದೋ ಬೇಡವೋ, ಈಗಲೋ ಆಗಲೋ,—ಎಂಬ ತೂಗುಯ್ಯಾಲೆಯಲ್ಲಿ ಅವನ ಮನೋಬುದ್ಧಿಗಳು ಸದಾ ಡೋಲಾಯನ ಮಾಡುತ್ತಿದ್ದುವು. "ಏನುಮಾಡೋಣ?" "ಅತ್ತ ಹುಲಿ ಇತ್ತ ದರಿ" "ಅದೂನೂ ಸರಿ ಇದೂನೂ ಸರಿ" "ಹೇಗೆ ಬೇಕಾದರೆ ಹಾಗೆ" "ಅಡ್ಡ ಗೋಡೆಯ ಮೇಲೆಯೇ ದೀಪ ಇರಿಸಿದರೆ ಸರಿ" "ನೀವು ಹೇಳುವುದು ನ್ಯಾಯ! ಅವರು ಹೇಳುವುದೂ ನ್ಯಾಯ!" "ಉಭಯ ಸಂಕಟ" ಅಂತ ತತ್ತರಿಸುತ್ತಾ ಮುಗ್ಗರಿಸುವುದೇ ಅವನ ಹಣೇಬರಹವಾಗಿ ಬಿಟ್ಟಿದೆ. ಯಾರು ಮಾತನಾಡಿಸಿದರೂ ಅವನು ಖಡಾಖಡಿಯಾಗಿ ಉತ್ತರವೇ ಕೊಡುವುದಿಲ್ಲ. "ಸುಮಾರಾಗಿ" "ಹೆಚ್ಚು ಕಡಿಮೆ" "ತತ್ರಾಪಿ" "ಸಾಧ್ಯವಾದರೆ" "ಬಹುಶಃ" "ದೇವರ ದಯೆಯಿದ್ದರೆ" "ಒಂದು ರೀತಿಯಲ್ಲಿ"—ಎಂಬ ಮಾತುಗಳು ಅವನ ಬರವಣಿಗೆಯಲ್ಲೂ ಸಂಭಾಷಣೆಯಲ್ಲೂ ಬಂದೇ ಬರುವುವು.

"ಏನೋ! ಶೇಷು! ಹೇಗಿದೀಯಾ?" ಅಂತ ಕೇಳಿದರೆ, "ಯಾರು? ನಾನ? ಗೊತ್ತಿಲ್ಲ ಅಪ್ಪ! ಅಂತೂ .... ಒಂದು ತರಹ .... ಯಾಕೆ? .... ಸುಮಾರಾಗಿ .... ಅಂತ ಕಾಣುತ್ತೆ .... ಯಾರಿಗೆ ಗೊತ್ತು .... . ಇದ್ದೇನೆ ಹೀಗೆ .... ಹೇಗೆ ಹೇಗೋ ...." ಎಂದು ಅನುಮಾನ ಮಾಲೆಯನ್ನು ನೆಯ್ಯುತ್ತಾನೆ. 'ಯಾಕೋ?' ಅಂದರೆ, "ಬಹಳ ಕಷ್ಟ ಕಣೋ, ಹೇಳುವುದು. ನಿಜಸ್ಥಿತಿ ಯಾರಿಗೆ ಗೊತ್ತು? ನನ್ನ ಶರೀರವಂತೂ ಕೆಲವುವೇಳೆ ಸತ್ತಹಾಗಿರುತ್ತದೆ; ಸಾಯುವಹಾಗಿರುತ್ತದೆ, ಕೆಲವು ವೇಳೆ

ಜ್ವರ ಬಂದಿದ್ದರೂ ಚಟ್ಟಹಾಗೆ ಕಾಣುವುದಿಲ್ಲವೆ. ನೆಗಡಿ, ಕೆಮ್ಮಲು, ಮೈಕೈ ನೋವು, ಗಂಟಲು ಕೆರೆತ,—ರವೆಯಷ್ಟು ಇದ್ದೇ ಇರಬಹುದು .... ಅದನ್ನೆಲ್ಲಾ ಕೂಲಂಕಷವಾಗಿ ಪರೀಕ್ಷಿಸಿ ಆಮೇಲೆಯಲ್ಲವೇನೋ ಉತ್ತರ ಹೇಳಬೇಕಾದದ್ದು?'' ಎಂದು ನಮ್ಮನ್ನೇ ಮೂದಲಿಸುವನು.

ಊಟಕ್ಕೆ ಕುಳಿತಾಗಲೂ ಶೇಷಗಿರಿಗೆ ಈ ಸಂದೇಹಗಳಿಂದ ಬಿಡುವಿಲ್ಲ; ಊಟದಲ್ಲಿ ಅವನಿಗೆ ಸುಖವೆಂಬುದೇ ಇಲ್ಲ. ಶೀತವೇ ಉಷ್ಣವೇ, ಖಾರವೇ ಸಪ್ಪೆಯೇ, ಮೊಸರೇ ಮಜ್ಜಿಗೆಯೇ, ಜಿಂಡಿದೆಯೇ ಇಲ್ಲವೇ,—ಎಂದು ಚರ್ಚೆಗೆ ಪ್ರಾರಂಭ.

ಇಂಥವನಿಗೆ ಮದುವೆ ಹೇಗಾಗಬೇಕು? ಹೆಣ್ಣು ನೋಡುವುದಕ್ಕೆ ಅಂತ ಹೇಳಿ ಅವನೂ ಅವನ ಸೋದರಮಾವನೂ ಮಲೆನಾಡು ಮೈದಾನ ಎಲ್ಲಾ ತಿರುಗಿದ್ದಾರೆ. ಆದರೆ ಶೇಷು ಒಂದು ತೀರ್ಮಾನಕ್ಕೆ ಬಂದರೆ ತಾನೆ? 'ಇವತ್ತು ಚೆನ್ನಾಗಿದ್ದರೂ ನಾಳೆ ಹೇಗಾಗುತ್ತಾರೋ ಈ ಹೆಣ್ಣು ಮಕ್ಕಳು?' "ಕಣ್ಣು ಕೊಂಚ ಅಗಲ ಜಾಸ್ತಿ ಇದ್ದಹಾಗೆ ತೋರುತ್ತೆ; ಇನ್ನೊಂದುಸಾರಿ ಹೋಗಿ ನೋಡಿದರೆ ವಾಸಿ', 'ಈಗಲೇ ಹೇಳಿ ಬಿಡಬೇಕೆ?' 'ಹ್ಯಾಗೆ ಹೇಳುವುದು' 'ಅವರೇನು ತಿಳಿದುಕೊಳ್ಳುತ್ತಾರೋ?' 'ನನಗೊಂದೂ ತೋಚುವುದಿಲ್ಲ' 'ನನಗೆ ಮದುವೆಯೇ ಬೇಡ' ಅಂತ ಹೀಗೆ ಚಂಚಲ ಚಿತ್ತನಾಗಿಯೇ ಶೇಷು ಬ್ರಹ್ಮಚರ್ಯವನ್ನು ಪರಿಪಾಲಿಸುತ್ತಿದ್ದಾನೆ. 'ಅವಳ ತಾಯಿಯ ಹಾಗೆ ಈ ಹುಡುಗೀನು ಎಂಟು ಮಕ್ಕಳನ್ನು ಹಡೆದರೆ ನನ್ನ ಗತಿಏನು?' ಎಂದು ಹೇಳಿ ಒಂದು ಒಳ್ಳೇ ಸಂಬಂಧವನ್ನು ಬಿಟ್ಟ. "ಛೋ! ಇಗ್ಗೇಶ!" ಅಂತ ನಾವು ಹಾಸ್ಯ ಮಾಡಿದರೆ, ''ಆಗುತ್ತೆ ಬಿಡ್ರೋ! ಒಂದುವೇಳೆ ಆಗಲಿಲ್ಲ, ಆಗದೆಏನು, ಆದರೂ ಆಗಲಿಲ್ಲ, ಅಥವಾ ಆಯಿತು, ನಷ್ಟವೇನು, ಲಾಭವೇನು, ಮುಸಲಾ......." ಎಂದು ಮಾತು ತೆಗೆಯುವನು.

ಬಿ. ಎ. ಪ್ಯಾಸು ಮಾಡಿದಾನೆ, ಶೇಷು! ಕರೀ ಗೌನು ಹಾಕಿಕೊಂಡು ಫೋಟೋ ತೆಗಿಸಿಕೊಂಡಿದ್ದಾನೆ. ಇಷ್ಟು ಅನುಮಾನಪೂರಿತವಾದ ಅವನ ಮೆದುಳಿಂದ ಪರೀಕ್ಷಕರ ಪ್ರಶ್ನೆಗಳಿಗೆ ನಿರ್ದಿಷ್ಟವಾದ ಉತ್ತರಗಳು ಹೇಗೆ ಬಂದುವು ಅಂತ ನಿಮಗೆ ಸಂದೇಹ ಬಂದಿರಬಹುದು. ಆದರೆ ಅವನ ಅನುಮಾನವೇ ಶೇಷಗಿರಿಗೆ ಡಿಗ್ರಿಯನ್ನು ಸಂಪಾದಿಸಿಕೊಟ್ಟಿತು. "ಪ್ರೊನ್ನನು ಟಿನ್ನನೇ?'' ಎಂಬ ಪ್ರಶ್ನೆಗೆ ಪ್ರೊನ್ನನೂ ಹೌದು, ಟಿನ್ನನೂ ಹೌದು, ಅದೂ ಸರಿ, ಇದೂ ಸರಿ, ಅದರಲ್ಲೂ ನ್ಯಾಯವಿದೆ, ಇದರಲ್ಲೂ ನ್ಯಾಯವಿದೆ—ಎಂದು ವಾದಿಸುವುದಕ್ಕೆ ಶೇಷಗಿರಿಗೆ ಸಮನಾಗಿ ಯಾರೂ ಇರಲಿಲ್ಲ. ''ರಗಳೆಯಿಂದ ರಗಳೆಯಾಗುವುದೇ?'' ''ನಾಗವರ್ಮನು ಒಬ್ಬರೇ ಇಬ್ಬರೇ?'' ''ಜಿನದತ್ತನು ಜೈನನೇ'' "ಏಳು ವರ್ಷದ ಯುದ್ಧ ಏಳು ವರ್ಷನಡೆಯಿತೆ?" ''ಕಲ್ಕತ್ತಾದ ಕತ್ತಲೆ ಕೋಣೆ ಕತ್ತಲೆಯಾಗಿತ್ತೆ?'' ''ಐಲು ದೊರೆ ಐಲನೆ?'' "ಎಂಟನೇ ಹೆನ್ರಿ ಭಂಡನೇ?'' "ಆಕಾಶದೊಳಗೆ ಘಟವೋ ಘಟದೊಳಗೆ ಆಕಾಶವೋ?" ''ವಿವಾಹ

ವಿಚ್ಛೇದನದಿಂದ ವಿವಾಹಕ್ಕೆ ಹಾನಿಯೇ?" ಎಂಬಿವೇ ಮುಂತಾದ ಪ್ರಶ್ನೆಗಳು ಶೇಷಗಿರಿಗೆ ಕಷ್ಟವೆನಿಸಿಲ್ಲ.

ಬಿ. ಎ. ಆದಮೇಲೆ ಶೇಷಗಿರಿಗೆ ಚಾಕರಿ ಸಿಗುವುದೇ ತುಂಬಾ ಕಷ್ಟವಾಗಿ ಹೋಗಿದೆ. ಯಾರಾದರೂ ಕೊ, ಬದುಕು, ಅಂತ ಅಂದರೂ ಕೂಡ ಅವನಿಗೆ ಅನುಮಾನ. 'ನಿಜವೇ?' 'ನಂಬಬಹುದೇ?' ಆ ಮೇಲೆ ಮೋಸಮಾಡಿದರೆ ಗತಿಏನು? "ಬೆಳ್ಳಗಿರುವುದೆಲ್ಲ ಹಾಲೆ? ತಣ್ಣಗಿರುವುದೆಲ್ಲ ನೀರೆ?" "ಸುಡುವುದೆಲ್ಲ ಸುಣ್ಣವೇ?" "ಅಲ್ಲಿ ಸೊಳ್ಳೆ ಜಾಸ್ತಿಅಂತಲ್ಲಾ .... " "ಅಲ್ಲಿ ನಾಳೆ ಮುಸಲಾ ಯಾರಾದರೂ ನನ್ನ ಹತ್ತಿರ ಬಂದು ಕೈ ಬೆಚ್ಚಗೆ ಮಾಡಿದರೆ ಗತಿಏನು? ನನ್ನ ಪ್ರಾಣಿವ್ರತ್ಯ ಉಳಿಯುವುದು ಹೇಗೆ?" ಹೀಗೆ ನೂರೆಂಟು ಸಂಶಯಗಳು. ಅಂತು, ಇನ್ನೂ ಅವನು ಮೊನ್ನೆ ವರೆಗೂ ತವರುಮನೆಯಲ್ಲೇ ಕವಳ ಧ್ವಂಸ ಮಾಡುತ್ತಿದ್ದ.

ಮೊನ್ನೆಯಿಂದ ಶೇಷಗಿರಿಯ ಸಂದೇಹ ವಿಪರೀತಕ್ಕಿಟ್ಟುಕೊಂಡಿದೆ. ಮಲ್ಲೇಶ್ವರಕ್ಕೆ ಅಂತ ಬಸ್ಸು ಹತ್ತಿದವನು ಇನ್ನೂ ಇಳಿದೇ ಇಲ್ಲ. ನಾಲ್ಕು ದಿನವಾಯಿತು. ಡೈರೆಕ್ಟರುಗಳೆಲ್ಲ ಬಂದು ಬುದ್ಧಿವಾದ ಹೇಳಿದರು. ಗದರಿಸಿದರು. ಆಸಾಮಿ ಮೂಲೆಯಲ್ಲೇ ಕುಳಿತುಕೊಂಡು, "ನಾನೇನು ಅಲ್ಲಾಡಿ ಅಲ್ಲ!" ಅಂತ ಒದರುತ್ತಿದಾನಂತೆ. ಹದಿನೇಳನೆಯ ಕ್ರಾಸಿಗೆ ಹೋದಾಗ, ನಾನು ಹಿಂದಕ್ಕೇ ಬಂದುಬಿಡುತ್ತೇನಯ್ಯ, ಅಂತ ಕಂಡಕ್ಟರನಿಗೆ ಹೇಳಿ, ಉದ್ದಕ್ಕೂ ಹೋಗಿ, ಹಿಂತಿರುಗುವಾಗ ಮೆಜೆಸ್ಟಿಕ್‌ಗೆ ಟಿಕೆಟ್ಟು ತೆಗೆದುಕೊಂಡನಂತೆ. ಅಲ್ಲಿ ಇಳಿಯದೆ, ಮಾರ್ಕೆಟ್ಟಿಗೆ ಹೋದ. ಅಲ್ಲಿಂದ ಮುಂದೆ, ಆಮೇಲೆ ಹಿಂದೆ, ತಿರುಗಿ ಯಥಾಪ್ರಕಾರ ಮಲ್ಲೇಸ್ವರ್. ಹೀಗೆ ಎಲ್ಲಿ ಇಳಿಯುವುದು ಎಂಬ ನಿರ್ಧಾರ ಮಾಡಲು ಅಶಕ್ತನಾಗಿ ರಾತ್ರಿ ಷೆಡ್ಡಿಗೆ ಹೋಗಿ ಗಾಡಿಯಲ್ಲೇ ಗೊರಕೆ ಹೊಡೆದ. ಬೆಳಗಾಗುತ್ತಲೂ ಮತ್ತೆ ಯಥಾಪ್ರಕಾರ. ಚತುರೋಪಾಯಗಳಿಗೂ ಜಗ್ಗದೆ, "ತಾಳಿ! ಇಳಿಯುತ್ತೇನೆ .... ಅಂದರೆ, ಎಲ್ಲಿಅಂತ ಯೋಚನೆಮಾಡುತ್ತಿದೇನೆ .... ಇಲ್ಲೇ ಇಳಿದರೂ ಇಳಿದೆ. ಇಲ್ಲ ಕೂತರೂ, ಕೂತೆ .... ಇಳಿದರೇನು ಕೂತರೇನು .... ಕೂತರೂ ಇಳಿದಹಾಗೆ .... ಇಳಿದರೂ ಕೂತ ಷ್ಟೆ ಕಷ್ಟ .... ಹ .... ಹ್ಹ .... ಹ್ಹೆ .... " ಅಂತ ಪ್ರಾರಂಭ ಮಾಡಿದನಂತೆ.

ಈಗ ಹುಚ್ಚಾಸ್ಪತ್ರೆಗೆ ಹಾಕಿದಾರೆ. "ಈ ಗೋಡೆಗೋಸ್ಕರ ನಾವೋ ನಮಗೋಸ್ಕರ ಗೋಡೆಯೋ? ಬಾಯೊಳಗೆ ನಾಲಿಗೆಯೋ, ನಾಲಿಗೆಯೊಳಗೆ ಬಾಯೋ?" ಎಂದು ಚರ್ಚಿಸುತ್ತಿದಾನಂತೆ, ನಿನ್ನೆಯಿಂದ.

ಸಂಶಯಾತ್ಮಾ ವಿನಶ್ಯತಿ.
ಗೀತೆ ಸುಳ್ಳಲ್ಲ.

—ನಾ. ಕ.

"ಮೋಹಿನಿ ಕತೆ"

ಭಾನುವಾರ ರಾತ್ರಿ ಊಟ ಆದ ಮೇಲೆ ಲೀಲ ರಾಮು, ಕಂಠಿ ನಾನು ಮಾತನಾಡುತ್ತಾ ಕುಳಿತಿದ್ದೆವು. ಲೀಲನಿಗೆ ನಾಲ್ಕು ವರ್ಷ, ರಾಮುನಿಗೆ ಎಂಟು, ಕಂಠಿಗೆ ಹತ್ತು. ಎಲ್ಲರೂ ನನ್ನ ತಪ್ಪುಗಳೇ. ಭಾನುವಾರ ರಾತ್ರಿ ಎಲ್ಲರೂ ಒಟ್ಟುಕೂಡುವುದು ವಾಡಿಕೆ. ಮಿಕ್ಕದಿನಗಳೆಲ್ಲಾ ಮನೆಗೆ ಬರುವ ವೇಳೆಗೆ ಮಕ್ಕಳು ಮಲಗಿಬಿಡುತ್ತವೆ. ಹಾಗಾಗಿ ಅಪ್ಪ ಯಾರು ಎಂದರೆ, ಅಗಸರವನಹಾಗೆ ವಾರಕೊಮ್ಮೆ ಮನೆಗೆಬರುವವನು ಎಂದು ಮಕ್ಕಳು ಹಾಸ್ಯಮಾಡುವಂತಾಗಿದೆ.

ಭಾನುವಾರ ಸಾಯಂಕಾಲ ಮಕ್ಕಳಿಗೆ ಒಂದೊಂದು ಕತೆ ಹೇಳುವ ವಾಡಿಕೆ. ಇವತ್ತೇಕೊ ನನಗೆ ಬೇಜಾರಾಗಿತ್ತು. "ಇಷ್ಟುದಿನವೂ ನಾನುಹೇಳಿದ್ದಾಯಿತು. ಈಗ ನೀವು ಯಾರಾದರೂ ಒಂದು ಕತೆ ಹೇಳಿ" ಎಂದೆ. ಕತೆ ಯೋಚಿಸುವುದಕ್ಕೆ ಐದು ನಿಮಿಷ ಕಾಲ ಕೊಡುವುದಾಗಿಯೂ ಹೇಳಿದೆ. ರಾಮುವು ಹೇಳಿದ ಯಾರು ಮೊದಲು ಯೋಚಿಸುತ್ತಾರೊ ಅವರೇ ಕತೆ ಹೇಳಬೇಕು ಎಂದು. ಆಗಲಿ ಎಂದು ಎಲ್ಲರೂ ಒಪ್ಪಿದರು. ಎರಡು ನಿಮಿಷಗಳಲ್ಲಿ. ಲೀಲ ನಾನು ಯೋಚಿಸಾಯಿತು ಎಂದಳು "ಶುದ್ಧ ಸುಳ್ಳು—ಹಳೇ ಕತೆಯನ್ನೇ ಹೇಳುತ್ತಾಳೆ" ಎಂದು ರಾಮು ಟೀಕಿಸಿದ. ಲೀಲ ಅವನು ಹೇಳಿದ್ದನ್ನು ಗಮನಿಸಿದಂತೆ ಕಾಣಲಿಲ್ಲ. ತನ್ನ ಮುಂಗುರುಳುನ್ನು ಹಿಂದೆಮಾಡಿಕೊಂಡು, ಲಂಗದ ನೆರಿಯನ್ನು ಸರಿಮಾಡಿಕೊಂಡು, ಕೆನ್ನೆ ಗುಳಿಬೀಳುವಂತೆ ಬಾಯಿ ಮಾಡಿಕೊಂಡು ಮುದ್ದುಮುದ್ದಾಗಿ ಹೇಳತೊಡಗಿದಳು.

"ಇದೇನು ಹಳೆಕತೆಯೇನೂ ಅಲ್ಲ. 'ಒಂದಾನೊಂದು ಕಾಲದಲ್ಲಿ' ತರಹದ್ದಲ್ಲ. ಮೊನ್ನೆ ಮೊನ್ನೆ ತಾನೆ ನಡೆದಿದ್ದು. ಒಂದು ರಾತ್ರಿ "ಒಬ್ಬರು" ಮಲಗಿದ್ದಾಗ ಕಿಟಕಿಯಿಂದಾಚೆ ಮೋಹಿನಿಯೊಬ್ಬಳು ಬಂದಳು. ಮೋಹಿನಿ ಎಷ್ಟು ಚೆನ್ನಾಗಿದ್ದಳು ಗೊತ್ತೆ? ಅ....ಷ್ಟು ಚೆನ್ನಾಗಿದ್ದಳು ಅವಳು "ಒಬ್ಬರ" ಹತ್ತಿರಬಂದು ಮನೆ ಹೊರಗಡೆ ಆಟವಾಡೋಣ ಬಾ ಎಂದು ಕರೆದಳು. ಕರೆದಮೇಲೆ ಪಕ್ಷಿಗಳಂತೆ ಕಿಟಕಿಯಾಚೆಯಿಂದ ಹಾರಿಹೋದಳು. "ಒಬ್ಬರು" ಕೂಡ ಮಹಡಿಯಿಂದ ಕೆಳಗೆ ಇಳಿದು ಬಂದು ಮೋಹಿನಿ ಜತೆಯಲ್ಲಿ ಆಟವಾಡಲು ಹೋದಳು "ಎಲಿ ಮೋಹಿನಿ ! ನೀನು ಕಿಟಕಿಯಾಚೆ ಹೇಗೆ ಹಾರಿಹೋದೆ ನನಗೂ ಹಾರುವುದನ್ನು ಹೇಳಿಕೊಡು" ಎಂದಳು. "ನೀನು ಮೋಹಿನಿಯಾದರೆ ಕಲಿತುಕೊಳ್ಳಬಹುದು. ನಿನ್ನನ್ನು ಮೋಹಿನಿಯನ್ನಾಗಿ ಮಾಡುತ್ತೇನೆ. ಅದಕ್ಕೆ ನೀನು ನನಗೆ ಏನು 'ಕೊಡುತ್ತಿ' ಎಂದು ಮೋಹಿನಿಯು ಕೇಳಿದಳು.

"ಒಬ್ಬಳು"ಹೇಳಿದಳು "ನಾನು ಮಹಡಿಯಿಂದ ಇಳಿದು ಬರುವಾಗ ಥಳಥಳ ಎಂತ ಹೊಳೆಯುತ್ತಿದ್ದ ಚಂದ್ರನ ಕಿರಣಗಳು ಇದ್ದುವು. ಅವುಗಳಲ್ಲಿ ನಿನಗಿಷ್ಟು ಕೊಡುತ್ತೇನೆ. ನೀನು ಅದನ್ನು ತಲೆಯಲ್ಲಿ ಹೂವಿನ ಹಾಗೆ ಮುಡಿದುಕೊಳ್ಳಬಹುದು" ಅಂತ.

'ಹಾಗೆಯೇ ಆಗಲಿ' ಎಂದಳು ಮೋಹಿನಿ.

"ಒಬ್ಬರು"ಚಂದ್ರನ ಕಿರಣಗಳಲ್ಲಿ ಕೆಲವನ್ನು ತೆಗೆದುಕೊಂಡು ಹೋಗಿ ಮೋಹಿನಿಗೆ ಕೊಟ್ಟರು. ಮೋಹಿನಿಯೂ ಕೂಡ "ಒಬ್ಬರ"ನ್ನುಮೋಹಿನಿಯನ್ನಾಗಿ ಮಾಡಿದಳು. ಆ ಮೇಲೆ ಸ್ವಲ್ಪ ಹೊತ್ತು ಆಟ ಮಾಡಿದರು. ಆ ಮೇಲೆ "ಒಬ್ಬರು" ಕಿಟಕಿಯ ಒಳಗಿಂದ ಹಾರಿ ಬಂದು ತಮ್ಮ ಹಾಸಿಗೆಯಮೇಲೆ ಮಲಗಿದರು.

ಬೆಳಗಾಗುತ್ತಲೂ"ಒಬ್ಬರು"ಎದ್ದರು. ಮನೆಯಲ್ಲಿದ್ದವರಿಗೆ ಯಾರಿಗೂ ಅವರು ಮೋಹಿನಿಯಾಗಿದ್ದರೆಂದು ಗೊತ್ತೇ ಆಗಲಿಲ್ಲ. ಅವರಿಗೆ ಮಾತ್ರಗೊತ್ತಿತ್ತು. ಇನ್ನು ಯಾರಿಗೂ ಗೊತ್ತಾಗಲಿಲ್ಲ.

ನಾನು ಹೇಳಿದೆ. "ಯಾರಿಗೂ ಗೊತ್ತಾಗಲಿಲ್ಲವೇ ಅಯ್ಯೊ ಪಾಪ"

ಆಗ ಅವಳಂದಳು ನನಗೆ ಮಾತ್ರ ಗೊತ್ತು.

ಹಾಗಾದರೆ ನನಗೆ ಹೇಳು ಎಂದು ಕೇಳಿದೆ.

"ರಾಮು ಕಂಡರೆ ನಗುತ್ತಾರೆ ನಾನು ಹೇಳಿದರೆ—ಆದರೆ ನಿನ್ನ ಕಿವಿಯಲ್ಲಿ ಪಿಸು ಮಾತಿನಲ್ಲಿ ಹೇಳುತ್ತೇನೆ" ಎಂದು ನನ್ನ ಕೊರಳನ್ನು ತಬ್ಬಿಕೊಂಡು ಕಿವಿಯಲ್ಲಿ ಹೇಳಿದಳು—ನಾನೇ "ಒಬ್ಬರು" ಎಂದು ಮೋಹಿನಿಯೇ ನನ್ನ ಕಿವಿಯಲ್ಲಿ ಪಿಸು ಮಾತನಾಡಿದಂತೆ ನನಗೆ ಕೇಳಿಸಿತು. ಕತೆ ದಿಟವೇನೋ ಎನ್ನಿಸಿತು.

ವಿಶ್ವವಿದ್ಯಾನಿಲಯಗಳಲ್ಲಿ ಚುನಾವಣೆಯು ಚುರುಕಾಗಿ ನಡೆಯುತ್ತಿರುವುದಂತೆ.

—ಆದರೆ ವಿಶ್ವವಿದ್ಯಾನಿಲಯದ ಹೊಟೇಲು ಮಾಲೀಕನಿಗೆ ಏನೂ ಪ್ರಯೋಜನವಾಗಿಲ್ಲವಂತೆ.

* *

ವೈಸರಾಯರ ಸಚಿವ ಮಂಡಳದಲ್ಲಿ ನಿಮ್ಮ ವರ್ಗದವರಿಗೆ ಒಂದು ಸ್ಥಾನವನ್ನು ಕೊಟ್ಟರೂ, ಅಷ್ಟೇ ನಿಮ್ಮರಾದ ಬ್ರಾಹ್ಮಣ ಪಂಗಡದವರಿಗೆ ಸ್ಥಾನವನ್ನು ಮೀಸಲಾಗಿಟ್ಟಿಲ್ಲವಂತೆ.

* *

ಊರಿನಲ್ಲಿ ಅರಿಶಿನ ಕಾಮಾಲೆ ಸಾಂಕ್ರಾಮಿಕ ಜಾಡ್ಯವಾಗಿ ಹಬ್ಬುತ್ತಿದೆಯಂತೆ.
—ಇದೇನು ? ಜಪಾನರ ಕೃತ್ರಿಮವೊ ?